UNIVERSAL
LIBRARY
OU_200801
UNIVERSAL
LIBRARY

# ಮೈಸೂರು ವಿಶ್ವವಿದ್ಯಾನಿಲಯ
# ಪ್ರಚಾರಪುಸ್ತಕಮಾಲೆ

೧. ಖಗೋಳಶಾಸ್ತ್ರ ಪ್ರವೇಶ—
ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ ಎಸ್ ಸಿ.

೨. ಸಮಾಜದ ರೋಗ ರುಜಿನಗಳು—
ಜಿ. ಹನುಮಂತರಾವ್, ಎಂ.ಎ

೩. ಶಿರಿಗೆ—ಡಿ ಆರ್. ಸುಬ್ಬರಾವ್, ಎಂ.ಎ.

೪. ನವರತ್ನಗಳು—ಎಚ್ ಸುಬ್ಬಜೋಯಿಸ್, ಎಂ.ಎಸ್ ಸಿ.

೫. ನಮ್ಮ ಹಳ್ಳಿಗಳು—ಜಿ. ಎನ್. ಕೃಷ್ಣಮೂರ್ತಿ, ಎಂ.ಎ.

೬. ಕುಮಾರವ್ಯಾಸ—*ಎಸ್ ವಿ. ರಂಗಣ್ಣ, ಎಂ.ಎ.

೭. ಹಂಪೆಯ ಹರಿಹರ—ಡಿ ಎಲ್. ನರಸಿಂಹಾಚಾರ್, ಎಂ.ಎ

೮. ಕನ್ನಡಸಾಹಿತ್ಯ—*ಕೆ. ವೆಂಕಟರಾಮಪ್ಪ, ಎಂ.ಎ.

೯. ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿರಾವ್,
ಎಂ.ಎಸ್ ಸಿ

೧೦. ಪಂಪ—ತೀ ನಂ ಶ್ರೀಕಂಠಯ್ಯ, ಎಂ.ಎ.

೧೧. ಪ್ರಾಣಿಜೀವನ—*ಎ. ನಾರಾಯಣರಾವ್, ಎಂ.ಎಸ್ ಸಿ.

೧೨. ಕನಸುಗಳು—ಎನ್. ಎಸ್. ನಾರಾಯಣಶಾಸ್ತ್ರಿ, ಎಂ.ಎ.

೧೩. ಮದುವೆ—ನಾ. ಕಸ್ತೂರಿ, ಎಂ.ಎ., ಬಿ.ಎಲ್.

೧೪. ನಮ್ಮ ಆರ್ಥಿಕ ದೃಷ್ಟಿ—*ಎಸ್. ಗೋಪಾಲಸ್ವಾಮಿ, ಎಂ.ಎ.

೧೫. ವಾಯುಗುಣ—ಕೆ. ಶೇಷಾದ್ರಿ ಅಯ್ಯಂಗಾರ್,
ಎಂ.ಎಸ್ ಸಿ., ಎಲ್ ಎಲ್.ಬಿ.

೧೬. ಬೆಳಕು—ಟಿ. ಎಸ್. ಸುಬ್ಬರಾಯ, ಎಂ.ಎಸ್ ಸಿ.

೧೭. ಕರ್ನಾಟಕ ಕಾದಂಬರಿ—ವಿ. ಸೀತಾರಾಮಯ್ಯ, ಎಂ.ಎ

---

ಸೋಲ್ ಏಜೆಂಟ್.

ಎಂ. ಆರ್. ಲಕ್ಷ್ಮೀನಾರಾಯಣ,

ಬುಕ್ ಸೆಲರ್, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರಪುಸ್ತಕಮಾಲೆ - ೪೩

# ತೆಲುಗು ಚಾಟುಪದ್ಯಗಳು

ಕೆ. ವೆಂಕಟರಾಮಪ್ಪ, ಎಂ.ಎ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

ಮೈಸೂರು

೧೯೪೩

ಮೊದಲನೆಯ ಮುದ್ರಣ ೩೦೦೨ ಪ್ರತಿಗಳು
೩೦-೮-೧೯೪೨

# ಮುನ್ನುಡಿ

ಈ ಪ್ರಚಾರಪುಸ್ತಕಮಾಲೆ ಮೂರು ವರ್ಷಗಳ ಹಿಂದೆ ಪ್ರಾರಂಭವಾಯಿತು. ಅತಿ ಸುಲಭವಾದ ಬೆಲೆಯಿಟ್ಟು ಇಂಥ ಪುಟ್ಟ ಪುಸ್ತಕಗಳನ್ನು ಹೊರಡಿಸಿದರೆ, ಅವನ್ನು ಓದಿ ಮೆಚ್ಚು ವವರು ಮೈಸೂರಿನ ಜನರಲ್ಲಿ ಬಹುವಾಗಿ ದೊರೆಯುವರೆಂಬ ಭರವಸೆಯೇ ಈ ಪ್ರಯತ್ನಕ್ಕೆ ಪ್ರೇರಕ. ಮೊಟ್ಟಮೊದಲು ಮೈಸೂರು ವಿಶ್ವವಿದ್ಯಾನಿಲಯ ಕೈಕೊಂಡ ಈ ಹೊಸ ಮಾರ್ಗದ ಉದ್ಯಮವು ಅದನ್ನು ಏರ್ಪಡಿಸಿದವರ ಅತ್ಯಂತ ನಿರೀಕ್ಷೆಯನ್ನೂ ಮೀರಿ ಫಲಕಾರಿಯಾಗಿದೆಯೆಂದು ದಿಟವಾಗಿ ಹೇಳಬಹುದು. ಈ ಮೂರು ವರ್ಷಗಳಲ್ಲಿ ೩೪ ಪುಸ್ತಕಗಳು ಪ್ರಕಟವಾಗಿವೆ. ಇವುಗಳಲ್ಲಿ ೧೨ ಸಾಹಿತ್ಯಕ್ಕೆ ಸಂಬಂಧಪಟ್ಟವು; ೧೧ ಭೌತ ಮತ್ತು ಜೀವವಿಜ್ಞಾನಗಳನ್ನು ಕುರಿತವು; ಉಳಿದವನ್ನು ಸಾಮಾಜಿಕಶಾಸ್ತ್ರಗಳ ಗುಂಪಿಗೆ ಸೇರಿಸಬಹುದು. ಇವುಗಳ ವಿಷಯಕ್ಷೇತ್ರವು ವಿಶಾಲವಾದದ್ದು. ಕನ್ನಡದ ವಿಚಾರದಲ್ಲಿ ಯಾರ ಮಾತಿಗೆ ಮನ್ನಣೆಯಿದೆಯೋ ಅಂಥ ಮಹನೀಯರು ಈ ಪುಸ್ತಕಗಳನ್ನು ಅತ್ಯುತ್ಸಾಹದಿಂದ ಬರಮಾಡಿಕೊಂಡಿದ್ದಾರೆ. ಈ ಮಾಲೆಯಲ್ಲಿ ಹೊಸದೊಂದು ಪುಸ್ತಕ ಹೊರಬಿದ್ದ ದಿನವೇ ಸುಮಾರು ೬೦೦ ಪ್ರತಿಗಳು ಮಾರಾಟವಾಗುತ್ತವೆ; ಈ ಮೂರು ವರ್ಷಗಳ ಅವಧಿಯಲ್ಲಿ ಸುಮಾರು ೬೦,೦೦೦ ಪ್ರತಿಗಳು ವಿಕ್ರಯವಾಗಿವೆ. ಈ ಪುಸ್ತಕಮಾಲೆಯನ್ನು ಪ್ರಾರಂಭಿಸಿದವರು ಮೈಸೂರು ವಿಶ್ವವಿದ್ಯಾನಿಲಯದ ವೈಸ್-ಛಾನ್ ಸಲರ್ ಪದವಿಯಿಂದ ಈಗತಾನೆ ವಿಶ್ರಾಂತಿ ಪಡೆದಿರುವ ರಾಜಕಾರ್ಯಪ್ರವೀಣ ಶ್ರೀಮಾನ್ ಎನ್. ಎಸ್. ಸುಬ್ಬರಾಯರು;

ಇದು ಯುಕ್ತವಾಗಿಯೇ ಇಷ್ಟೊಂದು ಜನಪ್ರಿಯವಾಗಿರುವು ದನ್ನು ನೋಡಿ ಅವರಿಗೆ ತುಂಬ ತೃಪ್ತಿಯುಂಟಾಗಿರಬೇಕು. ಈ ಪುಸ್ತಕಗಳನ್ನು ಯಾವ ಪ್ರತಿಫಲವೂ ಇಲ್ಲದೆ ಬರೆದು ಕೊಟ್ಟಿರುವ ಗ್ರಂಥಕರ್ತರಿಗೆ ಮೈಸೂರು ವಿಶ್ವವಿದ್ಯಾನಿಲಯದ ವಂದನೆಗಳು ಸಲ್ಲಬೇಕಾಗಿವೆ. ಈ ಮಾತುಗಳನ್ನು ಮುಗಿಸು ವುದಕ್ಕೆ ಮುಂಚೆ ಈ ಮಾಲೆಯ ಪ್ರಧಾನ ಸಂಪಾದಕರಾದ ಶ್ರೀಮಾನ್ ಜಿ. ಹನುಮಂತರಾಯರನ್ನು ಕುರಿತು ಮೆಚ್ಚಿಕೆಯ ಮಾತೊಂದನ್ನು ನಾನು ಆಡದಿದ್ದರೆ ಲೋಪವಾದೀತು. ಸಂಪಾ ದಕ ಕಾರ್ಯದಲ್ಲಿ ಇವರು ಸಲ್ಲಿಸಿರುವ ಕಾಲ, ಶಕ್ತಿ, ಶ್ರದ್ಧೆ ಇವು ಎಷ್ಟೆಂಬುದು ಅವರ ದುಡಿಮೆಯನ್ನು ಹತ್ತಿರದಿಂದ ನೋಡಿ ದವರಿಗೆ ಮಾತ್ರ ಗೊತ್ತಾಗಬಲ್ಲುದು. ಮೈಸೂರು ವಿಶ್ವವಿದ್ಯಾ ನಿಲಯದ ಪ್ರಚಾರಪುಸ್ತಕಮಾಲೆ ಇಂದಿನಂತೆಯೇ ಮುಂದೆಯೂ ಬಹುಕಾಲ ಜನಪ್ರಿಯವಾಗಿ ನಿಲ್ಲಲೆಂದು ಹಾರೈಸುತ್ತೇನೆ.

ಮೈಸೂರು, | ಇ. ಜಿ. ಮೆಕಾಲ್ಪೈನ್
ತಾ|| ೨೪-೪-೧೯೪೨. | ವೈಸ್-ಛಾನ್ಸೆಲರ್

# ವಿಷಯಾನುಕ್ರಮಣಿಕೆ


| | | |
|---|---|---|
| ೧. ಪೀಠಿಕೆ | ....... | ೧ |
| ೨. ಕವಿಕಥೆ | ....... | ೬ |
| ೩. ವೀರಕಥೆ | ....... | ೨೬ |
| ೪. ದೇಶವರ್ಣನೆ | ....... | ೩೧ |
| ೫. ನೀತಿಯ ಪದ್ಯಗಳು | ....... | ೩೩ |
| ೬. ಸಂಕೀರ್ಣ | ....... | ೪೫ |

# ತೆಲುಗು ಚಾಟುಪದ್ಯಗಳು

## ೧. ಪೀಠಿಕೆ

ಕಾವ್ಯಾನಂದವು ಸರ್ವರಿಗೂ ಬೇಕಾದದ್ದೇ. ಕಾವ್ಯವನ್ನೋದಿ, ಅಥವಾ ಕೇಳಿ, ಅದರ ಸ್ವಾರಸ್ಯದ ಅನುಭವವಾದಾಗ ಸಂತೋಷ ಪಡದೆ ಇರುವವರು ಯಾರೂ ಇಲ್ಲ. ಯಾವ ಕಾವ್ಯದಲ್ಲಿ ಇಂಥಾ ಆನಂದದಾಯಕ ಶಕ್ತಿಯಿಲ್ಲವೋ ಅಂಥಾ ಕಾವ್ಯವು ಪ್ರಚಾರವಾಗುವುದೇ ಇಲ್ಲ. ಒಂದುವೇಳೆ ಯಾರಾದರೂ ಧನವ್ಯಯಕ್ಕೆ ಸಿದ್ಧರಾಗಿ ಅಚ್ಚಿನ ಯಂತ್ರದ ಸಹಾಯದಿಂದ ಸಾವಿರಾರು ಪ್ರತಿಗಳನ್ನು ಅಚ್ಚುಹಾಕಿಸಿ ಲೋಕಕ್ಕೆ ಹಂಚಿದರೂ ಆ ಕಾವ್ಯವು ರಸಿಕರ ಮೆಚ್ಚಿಗೆಗೆ ಪಾತ್ರವಾಗದೆ ಖ್ಯಾತಿಬಾರದ ವಸ್ತುಗಳಂತೆ ಬಹುಬೇಗನೆ ಅಳಿಯುತ್ತವೆ. 'ಜಾಣರನ್ನು ತಲೆದೂಗಿಸುವ' ರೀತಿಯಲ್ಲಿ ಕಾವ್ಯಬರೆಯುವ ಶಕ್ತಿ ಎಲ್ಲರಿಗೂ ಇರುವುದಿಲ್ಲ. ಸಹಜವಾದ ಕವಿತಾಶಕ್ತಿಯಿರುವವರು ಮಾತ್ರ ಹಾಗೆ ಮಾಡಬಲ್ಲರು. ಅವರು ಬರೆದ ಕಾವ್ಯಗಳು ಲೋಕಪ್ರಿಯವಾಗಿ ಎಲ್ಲ ಕಾಲಕ್ಕೂ ಹೊಸದಾಗಿಯೇ ತೋರುತ್ತವೆ. ಮಹಾಕವಿಗಳು ಬರೆದ ಕಾವ್ಯಗಳನ್ನು ಒಂದುಸಲ ಓದಿ ಅವುಗಳ ಸ್ವಾರಸ್ಯವನ್ನು ಸಂಪೂರ್ಣವಾಗಿ ಅನುಭವಮಾಡುವುದಕ್ಕಾಗುವುದಿಲ್ಲ; ಅವುಗಳನ್ನು ಮತ್ತೆ ಮತ್ತೆ ಓದಬೇಕು. ಓದಿದ ಹಾಗೆಲ್ಲ ಅವುಗಳಲ್ಲಿ ಹೊಸ ಹೊಸ ಭಾವನೆಗಳು ತೋರುತ್ತವೆ.

ರಸಾನುಭವಕ್ಕೆ ವಿಸ್ತಾರವಾದ ಕಾವ್ಯವೇ ಆಗಬೇಕೆಂಬ ನಿಯಮವೇನೂ ಇಲ್ಲ. ಕವಿಯು ಚಿಕ್ಕ ಕವನವೊಂದರಲ್ಲಿ ತನ್ನ

ಅನುಭವಸಾರವನ್ನು ಲೋಕಕ್ಕೆ ಬೀರಬಹುದು. ಒಂದೊಂದು ವೇಳೆ ಒಂದು ಬಿಡಿ ಪದ್ಯವೇ ರಸದ ಚಿಲುಮೆಯಾಗಬಹುದು. ಚಿಲುಮೆಯಲ್ಲಿ ತೋಡಿದ ಹಾಗೆಲ್ಲ ನೀರೂರುವಂತೆ ಈ ಪದ್ಯವ ನ್ನೋದಿದ ಹಾಗೆಲ್ಲ ಆನಂದವುಂಟಾಗಬಹುದು. ಅಂತಹ ಪದ್ಯ ಗಳನ್ನು ಎಷ್ಟುಸಲ ಕೇಳಿದರೂ ಅವು ಹಳೆಯವಾಗುವುದಿಲ್ಲ; ಅವುಗಳ ಕಾಂತಿ ಕುಗ್ಗುವುದಿಲ್ಲ. ಇವು ಯಾವುದಾದರೂ ಮಹಾಕಾವ್ಯಕ್ಕೆ ಸೇರಿದ ಪದ್ಯಗಳಾಗಬಹುದು; ಅಥವಾ ಸ್ವತಂತ್ರವಾದ ಬಿಡಿಪದ್ಯಗಳಾಗಬಹುದು. ಈ ಬಗೆಯ ಲೋಕಪ್ರಿಯವಾದ ಪದ್ಯಗಳಿಗೆ ಸಾಮಾನ್ಯವಾಗಿ 'ಚಾಟುಪದ್ಯ' ಗಳೆಂದು ಹೆಸರು. ಚಾಟು ಎಂದರೆ ಪ್ರಿಯವಾದ ಮಾತು ಎಂದರ್ಥ. ಅರ್ಥಚಮತ್ಕಾರದಿಂದಲೋ ಅಥವಾ ಅದರಲ್ಲಿ ಅಡಕವಾಗಿರಬಹುದಾದ ಹಾಸ್ಯದಿಂದಲೋ ಅಥವಾ ಇನ್ನಾವು ದಾದರೂ ರಸಪ್ರಕಾಶ ಕಾರಣದಿಂದಲೋ ಒಂದು ಪದ್ಯ ಪ್ರಿಯ ವಾಗಬಹುದು. ಇಂಥ ಪದ್ಯಗಳನ್ನು ರಸಿಕರು ಒಬ್ಬರಿಗೊಬ್ಬರು ಹೇಳಿಕೊಂಡು ವಿನೋದ ಪಡುವುದು ಸ್ವಾಭಾವಿಕ. ಆದ್ದರಿಂದ ಈ ಪದ್ಯಗಳು ಶ್ರುತಿಯಂತೆ ಜನರ ಬಾಯಿಂದ ಬಾಯಿಗೆ ಹರ ಡುತ್ತವೆ. ಹೀಗೆ ಹರಡುವಾಗ ಅನೇಕವೇಳೆ ಆ ಪದ್ಯಗಳನ್ನು ಬರೆದ ಕವಿಗಳ ಹೆಸರು ಕೂಡ ತಿಳಿಯದೆ ಹೋಗುವುದೂ ಉಂಟು. "ಪದ್ಯ ಚೆನ್ನಾಗಿದೆ. ಅದರ ಸ್ವಾರಸ್ಯವನ್ನು ಆಸ್ವಾದಿಸಿ ಆನಂದಿಸಿದರೆ ಸರಿ. ಅದನ್ನು ಬರೆದ ಕವಿ ಯಾರಾದರೇನು?" ಹೀಗಾಗಿ ಈಗ ಪ್ರಚಾರದಲ್ಲಿರುವ ತೆಲುಗಿನ ಅನೇಕ ಚಾಟು ಪದ್ಯಗಳನ್ನು ರಚಿಸಿದವರು ಯಾರೋ, ಯಾವ ಕಾಲದವರೋ, ತಿಳಿಯದಂತಾಗಿದೆ. ಕ್ರಿ. ಶ. ಹನ್ನೆರಡನೆಯ ಶತಮಾನದವ ನಾದ ವೇಮುಲವಾಡ ಭೀಮಕವಿ ಬರೆದ ಪದ್ಯಗಳೆಂದು ಕೆಲವು

ಪ್ರಸಿದ್ಧವಾಗಿವೆ. ಅದಕ್ಕಿಂತ ಮುಂಚೆ ರಚಿತವಾದ ಪದ್ಯಗಳು ಯಾವುವೂ ದೊರೆತಂತೆ ತೋರುವುದಿಲ್ಲ. ತರುವಾಯ ಶ್ರೀನಾಥ, ಅಲ್ಲಸಾನಿಪೆದ್ದನ, ಮೊದಲಾದ ಸುಪ್ರಸಿದ್ಧರಾದ ಹಿರಿಯ ಕವಿಗಳನೇಕರು ಈ ಬಗೆಯ ಪದ್ಯಗಳನ್ನು ರಚಿಸಿದ್ದಾರೆ.

ಈ ಚಾಟು ಪದ್ಯಗಳು ಬಹಳ ಮಟ್ಟಿಗೆ ಆಶುಕವಿತೆಗಳು. ಕವಿಯು ಆಯಾ ಸಮಯದಲ್ಲಿ ತನಗೆ ತೋರಿದ ಭಾವನೆಗಳನ್ನು ಯಾವ ಪೂರ್ವಸಿದ್ಧತೆಯೂ ಇಲ್ಲದೆ ಒಡನೆಯೇ ಪದ್ಯರೂಪದಲ್ಲಿ ಹೇಳುವುದಕ್ಕೆ ಆಶುಕವಿತೆಯೆಂದು ಹೆಸರು. "ಹಲಗೆ ಬಳಪಗಳನ್ನು ಹಿಡಿಯದ ಅಗ್ಗಳಿಕೆಯು" ಈ ಕವಿಗಳಿಗೆ ಬಹಳ ಚೆನ್ನಾಗಿ ಸಲ್ಲುತ್ತದೆ. 'ಕುಂತಲ್ಲಿ ನಿಂತಲ್ಲಿ ಪದಗಳ ಹೇಳುವ' ಈ ಕವಿಗಳಿಗೆ ಕಾವ್ಯಪ್ರಿಯರಾದ ಆಂಧ್ರರಾಜರು ವಿಶೇಷವಾಗಿ ಮನ್ನಣೆ ಮಾಡಿದ್ದಾರೆ. ಹಾಗೆ ಮನ್ನಣೆ ಮಾಡದ ರಾಜರು, ಶ್ರೀಮಂತರೇ ಮೊದಲಾದವರಿಗೆ ಕವಿಗಳು ಮಾಡಿರುವ ಮರ್ಯಾದೆಯೂ ಈ ಪದ್ಯಗಳಿಂದ ತಿಳಿಯುತ್ತದೆ!

ಕವಿಯು ತನ್ನ ಅಂತರಂಗದಲ್ಲಿ ಹುಟ್ಟಿದ ಭಾವೋದ್ರೇಕವನ್ನು ಕಾವ್ಯದ ಮೂಲಕ ಲೋಕಕ್ಕೆ ವಿಶದಪಡಿಸುತ್ತಾನೆ. ಕವಿಯ ಯೋಗ್ಯತೆ ದೊಡ್ಡದಾದಷ್ಟೂ ಅವನ ಕಾವ್ಯದ ಮಹಿಮೆಯೂ ಹೆಚ್ಚುತ್ತದೆ. ಒಂದುವೇಳೆ ಕವಿಯು ತನ್ನ ಕವನಕ್ಕೆ ಸಣ್ಣ ವಸ್ತುವನ್ನೇ ಆರಿಸಿಕೊಂಡರೂ ಅವನ ಪ್ರತಿಭೆಯಿಂದ, ಹೇಳುವ ರೀತಿಯಿಂದ ಅದಕ್ಕೆ ಕಾಂತಿಯನ್ನುಂಟುಮಾಡುತ್ತಾನೆ. 'ಕಾವ್ಯಕ್ಕೆ ರೀತಿಯೇ ಜೀವ'ವೆಂದು ವಾದಿಸುವವರೂ ಉಂಟು. 'ಕಸವನ್ನು ರಸವನ್ನಾಗಿಸುವ' ಚೈತನ್ಯ ಕವಿಯ ಪ್ರತಿಭೆಗಿದೆ. ತಿಗಣೆ, ಹೊಗೆಸೊಪ್ಪು ಮುಂತಾದುವುಗಳನ್ನೂ ಕೆಲವರು ಕವಿಗಳು ಬಹಳ ಸುಂದರವಾಗಿ ವರ್ಣಿಸಿದ್ದಾರೆ.

ಚಾಟುಪದ್ಯಗಳಲ್ಲಿ ಇಂಥವೂ ಇವೆ. ಜೀವನದ ಸುಖದುಃಖಗಳನ್ನು ಹೃದಯಂಗಮವಾದ ರೀತಿಯಲ್ಲಿ ವರ್ಣಿಸುವ ಪದ್ಯಗಳೂ ಇವೆ. ಕವಿಯು ತನ್ನ ಸುತ್ತಮುತ್ತಿನ ಜನರ ಸುಖದುಃಖಗಳನ್ನು ವರ್ಣಿಸುವುದರಿಂದ ಅವನ ಕಾವ್ಯವು ಹೆಚ್ಚು ವಾಸ್ತವಿಕವಾಗುತ್ತದೆ. ಇವರಲ್ಲಿ ಕವಿಯು ತಾನು ಕಂಡು ಕೇಳದ, ಅನುಭವಿಸದ, ಸಂಗತಿಗಳಾವುವನ್ನೂ ವರ್ಣಿಸುವುದಿಲ್ಲ. ಆದ್ದರಿಂದ ಕಾವ್ಯವು ಜೀವನದ ನಿಜವಾದ ವಿಮರ್ಶೆಯಾಗುತ್ತದೆ. 'ಕಾವ್ಯವು ಜೀವನಚಿತ್ರ' ವೆಂಬ ಮಾತು ಇಲ್ಲಿ ಒಪ್ಪುತ್ತದೆ.

ಈ ಬಗೆಯ ಪದ್ಯಗಳು ತೆಲುಗಿನಲ್ಲಿ ಮಾತ್ರವೇ ಅಲ್ಲ, ಲೋಕದ ಎಲ್ಲ ಭಾಷೆಗಳಲ್ಲಿಯೂ ಇವೆ. ಸಂಸ್ಕೃತದಲ್ಲಿ ಇವು ಸುಭಾಷಿತಗಳೆಂದು ಪ್ರಸಿದ್ಧವಾಗಿವೆ. ಕನ್ನಡದಲ್ಲಿಯೂ ಈ ಬಗೆಯ ಪದ್ಯಗಳಿದ್ದಿರಬೇಕು. ಯಾವ ಕಾರಣದಿಂದಲೋ ಏನೋ ಅವು ನಮಗೆ ಈಗ ದೊರೆತಿಲ್ಲ. ಷಿಕಾರಿಪುರದ ಶಾಸನವೊಂದರಲ್ಲಿ ' ಆಶುಕವಿನಿಟಿಲಾಕ್ಷ ' ನೆಂದು ಪ್ರಸಿದ್ಧನಾದ ಮಲ್ಲಿದೇವನ ಹೆಸರಿದೆ. ಇಬ್ಬರು ಬೇರೆ ಬೇರೆ ಕಡೆಗಳಿಂದ ಒಂದು ಶ್ಲೋಕವನ್ನು ತಲೆಕೆಳಗಾಗಿ ಬರೆಯುತ್ತ, ಓದುತ್ತ ಬಂದರೆ ಮಲ್ಲಿದೇವನು ಅದನ್ನು ಸರಿಯಾಗಿ ಹೊಸ ಶ್ಲೋಕದ ಹಾಗೆ ಹೇಳಬಲ್ಲವನಾಗಿದ್ದನಂತೆ! ಅಷ್ಟೇ ಅಲ್ಲದೆ ಏಕಕಾಲವಲ್ಲಿ ನಾಲ್ವರು ನಾಲ್ಕು ಕಥೆಗಳನ್ನು ಹೇಳಿದರೆ ಕೇಳಿ ಅವನು ಅವುಗಳನ್ನು ಪುನಃ ಹೇಳುತ್ತಿದ್ದನಂತೆ. ಇಂಥವರು ಇನ್ನೂ ಹಲವರು ಕವಿಗಳು ಕನ್ನಡವಲ್ಲಿ ಪದ್ಯರಚನೆಮಾಡಿರಬೇಕು. ಅಲ್ಲದೆ ಕನ್ನಡದಲ್ಲಿ ಈಗ ಗ್ರಂಥರಚನೆಮಾಡಿ ಪ್ರಸಿದ್ಧರಾಗಿರುವ ಮಹಾಕವಿಗಳು ಯಾರೂ ತಮ್ಮ ಮುಖ್ಯ ಕಾವ್ಯಗಳ ಹೊರತು ಬೇರೆ ಒಂದು ಪದ್ಯವನ್ನೂ ರಚಿಸಲೇ ಇಲ್ಲವೆಂದು ನಂಬುವುದು ಕಷ್ಟ. ತಮ್ಮ

ಆಶ್ರಯದಾತರನ್ನು ಹೊಗಳಿ, ಅಥವಾ ಲೋಭಿಗಳಾದ ರಾಜರನ್ನು ತೆಗಳಿ, ಒಂದು ಪದ್ಯವನ್ನಾದರೂ ಅವರು ಬರೆಯದೆ ಇದ್ದಾರೆಯೆ? ಈಗ ದೊರೆತಿರುವ ಕನ್ನಡ ಶಾಸನಗಳ ಪದ್ಯಗಳನ್ನು ಗಮನಿಸಿದರೆ ಈ ಬಗೆಯ ಸ್ತೋತ್ರದ ಪದ್ಯಗಳಿಗೆ ಕನ್ನಡದಲ್ಲಿಯೂ ಕೊರತೆಯಿಲ್ಲವೆಂದು ತೋರುತ್ತದೆ. ಹೊಗಳಿಸಿಕೊಳ್ಳುವ ಅಪೇಕ್ಷೆ ಹಲವು ದಾತರಿಗೆ ಸ್ವಾಭಾವಿಕ. ಅಂಥವರನ್ನು ಹೊಗಳಿ ಅವರಿಂದ ದಾನಪಡೆಯುವ ಆಸೆ ವಿವೇಕಶಾಲಿಗಳಾದ ಕವಿಗಳಿಗೂ ಸ್ವಾಭಾವಿಕ. ಭಾಷೆ ಬೇರೆಯಾದ ಮಾತ್ರಕ್ಕೆ ಮನುಷ್ಯಸ್ವಭಾವ ಬೇರೆಯಾಗಲಾರದು. ಆದ್ದರಿಂದ ನಮಗೆ ಈಗ ದೊರೆಯದೆ ಇದ್ದ ಮಾತ್ರಕ್ಕೆ ಕನ್ನಡದಲ್ಲಿ ಇಂಥ ಪದ್ಯಗಳು ಇರಲೇ ಇಲ್ಲವೆಂದು ತಿಳಿಯಬಾರದು. 'ಸುಜನೋತ್ತಂಸ' 'ಸುಗುಣರತ್ನಕರಂಡ' ಎಂಬ ಅಂಕಿತಗಳುಳ್ಳ ಹಲವು ಪದ್ಯಗಳು ಪ್ರಚಾರದಲ್ಲಿವೆ. ಅವುಗಳಲ್ಲಿ ಹಲವು ರಮ್ಯವಾಗಿಯೂ ನೀತಿಬೋಧಕವಾಗಿಯೂ ಇವೆ. ಸರ್ವಜ್ಞನ ಪದ್ಯಗಳಂತು ಕನ್ನಡನಾಡಿನಲ್ಲೆಲ್ಲ ಹಬ್ಬಿ ಜನಪ್ರಿಯವಾಗಿವೆ.

ಇಂತಹ ಚಾಟುಪದ್ಯಗಳು ದ್ರಾವಿಡಭಾಷೆಗಳಲ್ಲಿ ಉಳಿದಿರುವುದಕ್ಕಿಂತ ಸಂಸ್ಕೃತದಲ್ಲಿ ವಿಶೇಷವಾಗಿ ಉಳಿದು ಬಂದಿದೆ. ಸಂಸ್ಕೃತ ಬಹುಕಾಲದಿಂದ ಭರತಖಂಡದಲ್ಲಿ ಬೆಳೆದುದೂ, ಹಿರಿಯದಾಗಿ ಬಾಳಿದುದೂ ಇದಕ್ಕೆ ಕಾರಣ. ಸುಭಾಷಿತ ಸಂಗ್ರಹಗಳು ಸಂಸ್ಕೃತದಲ್ಲಿ ಅನೇಕವಿವೆ. ಒಂದೊಂದರಲ್ಲೂ ಸಾವಿರಾರು ಪದ್ಯಗಳಿವೆ. ಇವುಗಳನ್ನು ಅವು ವಿನ್ಯಾಸಗೊಳಿಸುವ ವಸ್ತು ಅಥವಾ ವಿಷಯಗಳಿಗನುಸಾರ ವಿಂಗಡಿಸಿರುತ್ತಾರೆ. ಸಂಸ್ಕೃತ ಸುಭಾಷಿತಸಂಗ್ರಹಗಳಲ್ಲಿರುವಷ್ಟು ವಿಂಗಡಣೆಗಳನ್ನು ಇಲ್ಲಿ ಮಾಡುವುದಕ್ಕಾಗುವುದಿಲ್ಲ; ಏಕೆಂದರೆ ಸಂಸ್ಕೃತದ

ಸುಭಾಷಿತಭಾಂಡಾರದಲ್ಲಿ ಇರುವ ಪದ್ಯರತ್ನಗಳಲ್ಲಿ ಹತ್ತರಲ್ಲೊಂದು ಪಾಲೂ ತೆಲುಗಿನಲ್ಲಿಲ್ಲ. ಆದುದರಿಂದ ತೆಲುಗು ಪದ್ಯಗಳ ಜಾಯಮಾನ, ವಸ್ತುವೈವಿಧ್ಯಗಳನ್ನನುಸರಿಸಿ ಕೆಲವು ವಿಂಗಡಣೆಗಳನ್ನು ಮಾತ್ರ ಮಾಡಿದೆ.

ಕವಿಗಳು ತಮ್ಮ ಬದುಕಿನಲ್ಲಿ ನಡೆದ ಘಟನೆಗಳನ್ನು ವರ್ಣಿಸಿರುವ ಪದ್ಯಗಳನ್ನು "ಕವಿಕಥೆ" ಎಂಬ ಅಧ್ಯಾಯದಲ್ಲಿ ಕೊಟ್ಟಿದೆ. ತೆಲುಗುದೇಶದ ಊರುಗಳನ್ನೂ ಪ್ರಾಂತಗಳನ್ನೂ ಹೊಗಳಿ ಅಥವಾ ತೆಗಳಿ ಬರೆದಿರುವ ಪದ್ಯಗಳನ್ನು "ದೇಶವರ್ಣನೆ" ಎಂಬ ಅಧ್ಯಾಯದಲ್ಲಿ ಕೊಟ್ಟಿದೆ. "ವೀರಕಥೆ" ಎಂಬ ಪ್ರಕರಣದಲ್ಲಿ ರಣತಿಕ್ಕನ, ವೈಲಮಭೀಮ, ಚಿಕ್ಕದೇವರಾಜ ಒಡೆಯರ್ ಇವರ ವಿಷಯವಾಗಿ ಪ್ರಚಾರದಲ್ಲಿರುವ ಕೆಲವು ಪದ್ಯಗಳನ್ನು ಮಾತ್ರ ಕೊಡಲಾಗಿದೆ. ನೀತ್ಯುಪದೇಶವನ್ನೊಳಕೊಂಡ ಪದ್ಯಗಳನ್ನೇ ಬೇರೆ ಒಂದು ಅಧ್ಯಾಯವಾಗಿ ಜೋಡಿಸಿದೆ. ಈ ಯಾವಜಾತಿಗೂ ಸೇರದ ಪದ್ಯಗಳನ್ನು "ಸಂಕೀರ್ಣ" ವರ್ಗಕ್ಕೆ ಸೇರಿಸಿದೆ.

---

## ೧. ಕವಿಕಥೆ

ಕೆಲವು ಚಾಟುಪದ್ಯಗಳು ಕವಿಗಳ ಜೀವನ ಚರಿತ್ರೆಗೆ ಸಂಬಂಧಪಟ್ಟವು. ಇವುಗಳ ಆಧಾರದಿಂದ ಯಾವನೊಬ್ಬ ಕವಿಯ ಸಂಪೂರ್ಣ ಚರಿತ್ರೆಯನ್ನೂ ಊಹಿಸುವುದು ಸಾಧ್ಯವಲ್ಲ. ಆದರೆ ಕೆಲವು ಕವಿಗಳ ಸ್ವಭಾವವನ್ನೂ ಅವರ ಜೀವನದ

ಕ್ರಮವನ್ನೂ ತಕ್ಕಮಟ್ಟಿಗೆ ತಿಳಿದುಕೊಳ್ಳಬಹುದು. ಕವಿಗಳು ತಮ್ಮ ಸುಖದುಃಖಗಳನ್ನು ಕುರಿತು ಕವಿತೆ ಕಟ್ಟಿದ್ದಾರೆ. ಹದಿನಾಲ್ಕನೆಯ ಶತಮಾನದ ಕೊನೆಯಲ್ಲಿ ಪ್ರಸಿದ್ಧನಾದ ಶ್ರೀನಾಥಕವಿಯು ಬಹಳ ರಸಿಕನು; ಬಹಳ ಸುಖಜೀವಿ. ಆತನು ಒಂದು ಸಲ ವಿಜಯನಗರದ ಅರಸನಾದ ಪ್ರೌಢದೇವ ರಾಯನನ್ನು ನೋಡಬಯಸಿ ಕನ್ನಡ ರಾಜ್ಯಕ್ಕೆ ಬಂದನು. ಆದರೆ ಅಲ್ಲಿ ಎಷ್ಟು ದಿನ ಕಾದರೂ ಅವನಿಗೆ ರಾಜಸಂದರ್ಶನ ಲಭಿಸಲಿಲ್ಲ. ಆಗ ಆತನು ಬಹಳ ಬೇಸರಗೊಂಡು ಹೇಳಿದ ಪದ್ಯವಿದು:

ಕುಲ್ಲಾಯುಂಚಿತಿ ಗೋಕಸುಟ್ಟಿತಿ ಮಹಾಕೂರ್ಪಾಸಮು ಸ್ದೊಡಿಗಿತಿನ್
ವೆಲ್ಲುಲ್ಲಿನ್ ತಿಲಪಿಷ್ಟಮುನ್ ಪಿಸಿಕಿತಿನ್ ವಿಶ್ವಸ್ತ ವಡ್ಡಿಂಪಗಾ
ಸಲ್ಲಾನಂಬಲಿ ದ್ರಾವಿತಿನ್ ರುಚುಲು ದೋಸಂಬಂಚು ಬೋನಾಡಿತಿನ್
ದಲ್ಲೀ ಕನ್ನಡರಾಜ್ಯಲಕ್ಷ್ಮೀ! ದಯಲೇದಾ ನೇನು ಶ್ರೀನಾಥುಡನ್ ॥

ಕುಲಾವಿಯನ್ನು ಇಟ್ಟುಕೊಂಡೆ. ಸೀರೆ (ರುಮಾಲು) ಯನ್ನು ತಲೆಗೆ ಸುತ್ತಿದೆ. ಈ ದೊಡ್ಡ ಕುಪ್ಪಸ (ನಿಲುವಂಗಿ) ವನ್ನು ತೊಟ್ಟುಕೊಂಡೆ. ಬೆಳ್ಳುಳ್ಳಿ ಎಳ್ಳುಗಳ ಚಟ್ನಿಯನ್ನು ತಿನ್ನಲಾರದೆ ಕೈಲಿ ಹಿಸುಕಿ ಬಿಸಾಟೆ. ತಣ್ಣನೆಯ ಗಂಜಿಯನ್ನು ಕುಡಿದೆ. ರುಚಿಗಳು ದೋಷವೆಂದು ಬಿಟ್ಟುಬಿಟ್ಟೆ. ತಾಯಿ, ಕನ್ನಡ ರಾಜ್ಯಲಕ್ಷ್ಮೀ, ಇಷ್ಟಾದರೂ ನಿನಗೆ ದಯೆ ಬರಲಿಲ್ಲವೆ? ನಾನು ಶ್ರೀ 'ನಾಥ.'

ಆಮೇಲೆ ಶ್ರೀನಾಥನಿಗೆ ರಾಜಸಂದರ್ಶನ ಲಭಿಸಿದುದೇ ಅಲ್ಲದೆ ಅರಸಿನಿಂದ ಕನಕಾಭಿಷೇಕವೇ ನಡೆಯಿತು!

ಹೀಗೆ ರಾಜಸನ್ಮಾನಿತನಾಗಿ ರಸಿಕ ಜೀವನವನ್ನು ನಡೆ

ಸಿದ ಶ್ರೀನಾಥನು ಕೊನೆಗೆ ಬಹಳ ಕಷ್ಟಕ್ಕೀಡಾದನು. ರಾಜಮಹೇಂದ್ರ ಪಟ್ಟಣವು ಶತ್ರುವಶವಾಗಲು ಶ್ರೀನಾಥನಿಗಿದ್ದ ರಾಜಾಶ್ರಯ ತಪ್ಪಿತು. ಯತ್ನವಿಲ್ಲದೆ ಶ್ರೀನಾಥನು ಕೃಷ್ಣಾ ನದೀ ತೀರದ ಬೊಡ್ಡುಪಲ್ಲಿಯೆಂಬ ಗ್ರಾಮವನ್ನು ಗುತ್ತಿಗೆಗೆ ತೆಗೆದುಕೊಂಡನು. ಆದರೆ ದುರ್ದೈವದಿಂದ ಆ ವರ್ಷ ಪ್ರವಾಹ ಹೆಚ್ಚಾಗಿ ಬಂದು ಬೆಳೆಯೆಲ್ಲ ಹಾಳಾಯಿತು. ಗುತ್ತಿಗೆ ಹಣ ಹೊರಡುವುದೇ ಅಸಾಧ್ಯವಾಯಿತು. ಆ ಪ್ರಾಂತ್ಯದ ಒಡೆಯರಾದ ಗಜಪತಿರಾಜರು ಸುಮ್ಮನೆ ಬಿಡುವವರಲ್ಲ. ಗುತ್ತಿಗೆಯನ್ನು ಕೊಡದ ಈ ಕವಿರಾಜನಿಗೆ ಕೋಳ ಹಾಕಿ, ಗುಂಡು ಹೊರಿಸಿ, ಮೆರವಣಿಗೆ ಮಾಡಿ ಅವಮಾನ ಪಡಿಸಿದರು. ಆಗ ಕನ್ನಡರಾಯನ ಮುತ್ತಿನ ಸಾಲೆಯಲ್ಲಿ ಕನಕಸ್ನಾನ ಮಾಡಿದ ಈ ಕವಿರಾಜನು ತನ್ನ ಪೂರ್ವದ ವೈಭವವನ್ನು ನೆನಸಿಕೊಂಡು ಹೀಗೆ ಪ್ರಲಾಪಿಸಿದ್ದಾನೆ:

ಕವಿರಾಜುಕಂಠಂಬು ಕೌಗಿಲಿಂಚೆನು ಗದಾ
  ಪುರವೀಧಿನೆದುರೇಗ ಬೊಗಡದಂಡ
ಸಾರ್ವಭೌಮುನಿ ಭುಜಾಸ್ತಂಭಮೆಕ್ಕೆನುಗದಾ
  ನಗರಿವಾಕಿಟನುಂಡು ನಲ್ಲಗುಂಡು
ವೀರಭದ್ರಾರೆಡ್ಡಿವಿದ್ವಾಂಸು ಮುಂಜೇತ
  ವಿಯ್ಯಮಂದೆನುಗದಾ ವೆದುರುಗೊಡಿಯ
ಆಂಧ್ರನೈಷಧಕರ್ತ ಯಂಘ್ರಿಯುಗ್ಮಂಬುನ
  ದಗಿಲಿಯುಂಡೆನುಗದಾ ನಿಗಳಯುಗಮು

ಕೃಷ್ಣವೇಣಮ್ಮ ಗೊನಿಪೋಯೆನಿಂತ ಫಲಮು
ಬಿಲಬಿಲಾಕ್ಷುಲು ದಿನಿಪೋಯೆ ತಿಲಲುಪೆಸಲು
ಬೊಡ್ಡುಪಲ್ಲೆನು ಗೊಡ್ಡೇರಿ ಮೋಸಪೋತಿ
ನೆಟ್ಟು ಚೆಲ್ಲಿಂತು ಡಂಕಂಬುಲೇದುನೂರ್ಲು ?

ಕವಿರಾಜನ ಕೊರಳಿಗೂ ಅಪಮಾನಕರವಾದ ಈ ದಂಡೆಯು ಬಿತ್ತಲ್ಲವೆ ? ಕವಿಸಾರ್ವಭೌಮನಾದ ನನ್ನ ಭುಜದ ಮೇಲೆ ಈ ಊರು ಬಾಗಿಲಿನ ಕರಿಯ ಗುಂಡನ್ನು ಎತ್ತಿದರಲ್ಲವೆ ? ವೀರಭದ್ರಾರೆಡ್ಡಿಯ ಆಸ್ಥಾನ ವಿದ್ವಾಂಸನ ಮುಂಗೈಗೆ ಬಿದಿರಿನ ಕೋಳವನ್ನು ಹಾಕಿದರು. ಆಂಧ್ರನೈಷಧಕರ್ತನಾದ ನನ್ನ ಅಂಘ್ರಿಯುಗ್ಮಕ್ಕೆ ಸಂಕೋಲೆ ತಗುಲಿಸಿದರು. ಕೃಷ್ಣವೇಣಮ್ಮನು (ನದಿ) ಕೊಂಚ ಫಲವನ್ನು ಕೊಂಡು ಹೋದಳು. ಇಲಿಗಳು, ಕ್ರಿಮಿಕೀಟಗಳು ಕೊಂಚ ತಿಂದು ಹಾಕಿದುವು. ಬೊಡ್ಡುಪಲ್ಲಿ ಎಂಬ ಈ ಕುಗ್ರಾಮಕ್ಕೆ ಬಂದು ಮೋಸಹೋದೆ. ಏಳುನೂರು ಟಂಕಗಳಷ್ಟು ಕಂದಾಯವನ್ನು ನಾನು ಹೇಗೆ ಸಲ್ಲಿಸಲಿ ?

ಹೀಗೆ ಕಂದಾಯವನ್ನು ಕೊಡಲಾರದೆ ಗಜಪತಿರಾಜರ ಕಾಟಕ್ಕೆ ಈಡಾಗಿ ಬಹಳ ರಿಕ್ತಾವಸ್ಥೆಯಲ್ಲಿಯೇ ತನ್ನ ವೃದ್ಧಾಪ್ಯವನ್ನು ಕಳೆದು ಕೊನೆಗೆ ಶ್ರೀನಾಥನು ದಿವಂಗತನಾದನು. ತನ್ನ ಅವಸಾನಕಾಲದಲ್ಲಿ ಸಹ ಆತನು ತನ್ನ ಆತ್ಮ ಪ್ರತ್ಯಯುವನ್ನು ಬಿಡಲಿಲ್ಲ. ಕೊನೆಗಾಲದಲ್ಲಿ ಶ್ರೀನಾಥನು ಹೇಳಿದ ಪದ್ಯವಿದು :

ಕಾಶಿಕಾವಿಶ್ವೇಶು ಗಲಿಸೆ ವೀರಾರೆಡ್ಡಿ
  ರತ್ನಾಂಬರಂಬು ಲೇರಾಯಃಡಿಚ್ಚು
ರಂಭಗೂಡೆ ದೆನುಂಗುರಾಯರಾಹುತ್ತುಂಡು
  ಕಸ್ತೂರಿ ಕೇರಾಜು ಪ್ರಸ್ತುತಿಂತು

ಸ್ವರ್ಗಸ್ಥುಡಯ್ಯೆ ವಿಸ್ಸನಮಂತ್ರಿ ಮಱಿ ಹೇಮ
  ಪಾತ್ರಾನ್ನ ಮೆವ್ವನಿ ಪಂಕ್ತಿ ಗಲದು
ಕೈಲಾಸಗಿರಿ ಬಂಡೆ ಮೈಲಾರುವಿಭುಡೇಗಿ
  ದಿನವೆಚ್ಚ ಮೇರಾಜು ತೀರ್ಪಗಲಡು

ಭಾಸ್ಕರುಡು ಮುನ್ನೆ ದೇವುನಿಪಾಲಿ ಕರಿಗೆ
ಗಲಿಯುಗಂಬುನ ನಿಕನುಂಡ ಗಷ್ಟಮನುಚು
ದಿವಿಜಕವಿವರು ಗುಂಡಿಯಲ್ ದಿಗ್ಗುರನಗ
ನರುಗುಚುನ್ನಾಡು ಶ್ರೀನಾಥು ಡಮರಪುರಿಕಿ.

ವೀರಾರೆಡ್ಡಿಯು ಕಾಶೀವಿಶ್ವೇಶ್ವರನನ್ನು ಸೇರಿಬಿಟ್ಟ. ಇನ್ನು ರತ್ನಾಂಬರಗಳನ್ನು ಯಾವ ರಾಯನು ಕೊಡುತ್ತಾನೆ? ತೆನುಗು ರಾಯನು ರಂಭೆಯನ್ನು ಕೂಡಿದ. ಕಸ್ತೂರಿಗಾಗಿ ಇನ್ನು ಯಾವ ರಾಜನನ್ನು ಹೊಗಳಲಿ? ವಿಸ್ಸನ ಮಂತ್ರಿ ಸ್ವರ್ಗಸ್ಥನಾದ. ಇನ್ನು ಹೇಮಪಾತ್ರಾನ್ನವು ಯಾರ ಪಂಕ್ತಿಯಲ್ಲಿ ಲಭಿಸೀತು? ವೈಲಾರ ವಿಭುವು ಕೈಲಾಸಗಿರಿಯನ್ನು ಹತ್ತಿದನು. ಇನ್ನು ನನ್ನ ದೈನಂದಿನ ವೆಚ್ಚವನ್ನು ಯಾವ ರಾಜನು ತೀರಿಸಬಲ್ಲನು? ಭಾಸ್ಕರನು ಮೊದಲೆ ದೇವರ ಬಳಿಗೆ ಸೇರಿದನು. ಆದ್ದರಿಂದ ಇನ್ನು ಕಲಿಯುಗದಲ್ಲಿರುವುದು ಕಷ್ಟವೆಂದು ಯೋಚಿಸಿ ಶ್ರೀನಾಥನು ಅಮರಪುರಿಗೆ ಹೋಗುತ್ತಿದ್ದಾನೆ; ದೇವಕವಿ (ಶುಕ್ರ)ಯ ಎದೆ ಹೊಡೆದುಕೊಳ್ಳುತ್ತಿದೆ.

" ಇನ್ನು ಶ್ರೀನಾಥನು ಸ್ವರ್ಗಕ್ಕೆ ಬರುವನಲ್ಲಾ ಎಂದು ದೇವಕವಿಯ (ಶುಕ್ರನ) ಗುಂಡಿಗೆಯು 'ದಿಗ್ಗ್' ಎಂದಿತಂತೆ!

ಹೀಗೆಯೇ ರಾಜಾಶ್ರಯದಲ್ಲಿ ಮೊದಲು ಬಹಳ ವೈಭವದಿಂದ ಬಾಳಿ ಆಶ್ರಯ ತಪ್ಪಿದ ಮೇಲೆ ಬಹಳ ದುಃಖಕ್ಕೀಡಾದ ಇನ್ನೊಬ್ಬ ಕವಿ ಅಲ್ಲಸಾನಿಪೆದ್ದನ. ಈತನು ವಿಜಯನಗರದ ಸಾರ್ವಭೌಮನಾದ ಶ್ರೀಕೃಷ್ಣದೇವರಾಯನ ಆಸ್ಥಾನ ಕವಿ; ಅಷ್ಟೇ ಅಲ್ಲ, ಆಪ್ತಸ್ನೇಹಿತ. ಈತನು ತನ್ನ ಆಶ್ರಯದಾತನಾದ ಅರಸು ದಿವಂಗತನಾದ ಮೇಲೆಯೂ ಜೀವಿಸಿದ್ದನು. ಆ ಸಮಯ

ದಲ್ಲಿ ಈತನು ಕಟ್ಟಿದ ಎರಡು ಪದ್ಯಗಳು ಈ ಚಾಟುಪದ್ಯಗಳ ಜಾತಿಗೇ ಅಲಂಕಾರಪ್ರಾಯವಾಗಿವೆ. ತನ್ನ ಅರಸನ ಸ್ನೇಹಾತಿಶಯವನ್ನು ನೆನಸಿಕೊಂಡು ಈ ಪದ್ಯ ಹೇಳಿದಾಗ ಕವಿ ಕಣ್ಣೀರಿಟ್ಟಿರಬೇಕು.

ಎದುರೈನಚೋ ಮದಕರೀಂದ್ರಮುನಿಲ್ಪಿ
  ಕೇಲೂತಯಿಚ್ಚಿ ಯೆಕ್ಕಿಂಚುಕೊನಿಯೆ
ಮನುಚರಿತ್ರಂಬಂದುಕೊನುವೇಳ ಬುರಮೇಗ
  ಪಲ್ಲಕಿ ದನಕೇಲಬಟ್ಟಿ ಯೆತ್ತೆ
ಬಿರುದೈನ ಕವಿಗಂಡ ಪೆಂಡೇರಮುನಕೀವೆ
  ತಗುವಂಚು ದಾನೆ ಪಾದಮುನ ದೊಡಿಗೆ
ಗೋಕಟಗ್ರಾಮಾದ್ಯನೇಕಾಗ್ರಹಾರಂಬು
  ಲಡಿಗಿನ ಸೀಮಲಯಂಮಸಿಚ್ಚೆ
ಅಂಧ್ರಕವಿತಾಪಿತಾಮಹ ! ಯಲ್ಲಸಾನಿ
ಪೆದ್ದನಕವೀಂದ್ರ! ಯನಿ ನನ್ನುಪಿಲ್ಚುನಟ್ಟಿ
ಕೃಷ್ಣರಾಯಲತೋಡಿ ದಿವಿಕೇಗಲೇಕ
ಬ್ರತಿಕಿಯುನ್ನಾಡ ಜೀವಚ್ಛವಂಬನಗುಚು.

ರಾಜಬೀದಿಯಲ್ಲಿ ನಾನು ಎದುರಾದರೆ ತನ್ನ ಮದ್ದಾನೆಯನ್ನು ನಿಲ್ಲಿಸಿ ತನ್ನ ಕೈಕೊಟ್ಟು ಆನೆಯಮೇಲಕ್ಕೆ ಹತ್ತಿಸಿಕೊಳ್ಳುತ್ತಿದ್ದ. 'ಮನುಚರಿತ್ರೆ'§ಯನ್ನು ತೆಗೆದುಕೊಳ್ಳುವಾಗ ನನ್ನನ್ನು

§ ಅಲ್ಲಸಾನಿಪೆದ್ದನನು " ಸ್ವಾರೋಚಿಷಮನುಸಂಭವಂ " ಅಥವಾ 'ಮನುಚರಿತ್ರ' ಎಂಬ ಹೆಸರಿನ ಒಂದು ಪ್ರಬಂಧಕಾವ್ಯವನ್ನು ರಚಿಸಿ ಕೃಷ್ಣದೇವರಾಯನಿಗೆ ಅಂಕಿತಮಾಡಿದ್ದಾನೆ. 'ಕೋಕಟ'ವೆಂಬ ಗ್ರಾಮವನ್ನು ತಾನು ಅರಸನಿಂದ ಪಡೆದು ಬೇರೊಬ್ಬನಿಗೆ ದಾನಕೊಟ್ಟನು.

ಪಲ್ಲಕ್ಕಿಯಲ್ಲಿ ಕೂಡಿಸಿ ಅದನ್ನು ತಾನೇ ಹೊತ್ತನು. 'ಕವಿಗಂಡ ಪೆಂಡೆಯ'ಕ್ಕೆ "ನೀನೇ ಅರ್ಹ" ನೆಂದು ಹೇಳಿ ಅದನ್ನು ತಾನೇ ನನ್ನ ಕಾಲಿಗೆ ತೊಡಿಸಿದ. 'ಕೋಕಟ' ಮುಂತಾದ ಹಲವು ಗ್ರಾಮಗಳನ್ನು ನಾನು ಕೋರಿದ ಪ್ರಾಂತ್ಯಗಳಲ್ಲಿ ದಾನಕೊಟ್ಟ. 'ಆಂಧ್ರಕವಿತಾಪಿತಾಮಹ' ಎಂದು ಅಭಿಮಾನದಿಂದ ಕರೆಯುತ್ತಿದ್ದ ಕೃಷ್ಣರಾಯರೊಡನೆ ಸ್ವರ್ಗಕ್ಕೆ ಹೋಗಲಾರದೆ ಜೀವಚ್ಛವವಾಗಿ ಇನ್ನೂ ಬದುಕಿದ್ದೇನೆ.

ಕೃಷ್ಣದೇವರಾಯನು ಸತ್ತುಹೋದಮೇಲೆ ಗಜಪತಿರಾಯನು ವಿಜಯನಗರದ ಮೇಲೆ ದಂಡೆತ್ತಿಬಂದನು. ಆ ಸಮಯದಲ್ಲಿ ಅಲ್ಲಸಾನಿಪೆದ್ದನನು ಈ ಪದ್ಯವನ್ನು ಒಂದು ಓಲೆಯುಗರಿಯಮೇಲೆ ಬರೆದು ಕಳುಹಿಸಲು ಅದನ್ನು ಓದಿಕೊಂಡು ಲಜ್ಜೆಪಟ್ಟು ಗಜಪತಿರಾಜನು ಹಿಂತಿರುಗಿ ಹೋದನೆಂದು ಕಥೆ:

ರಾಯರಾವುತುಗಂಡ ರಾಚಯೇನುಗು ವಚ್ಚಿ
　ಯಾರಟ್ಲಕೋಟ ಗೋರಾಡುನಾಡು
ಸಂಪೆಟನರಪಾಲಸಾರ್ವಭೌಮುಡು ವಚ್ಚಿ
　ಸಿಂಹಾದ್ರಿ ಜಯಶಿಲ ಜೇರ್ಚುನಾಡು
ನೆಲಗೋಲುಸಿಂಹಂಬು ಚೇರಿ ಧಿಕ್ಕೃತಿ ಗಂಚು
　ತಲ್ಪುಲ ಗರುಲ ಡೀಕೊಲ್ಪುನಾಡು
ಘನತರ ಗಂಡಪೆಂಡೆರಮಿಚ್ಚಿ ಕೂತು ರಾಯಲ
　ಗಂಡಕೊನಗೂರ್ಚುನಾಡು

ನೊಡಲಿರುಂಗವೊ ಚಚ್ಚಿತೋ ಯುರ್ವಿಲೇವೊ
ಚೇರಜಾಲಕ ತಲಚೆಡಿ ಜೀರ್ಣಮೈತೊ
ಕನ್ನಡಂ ಬಿಟ್ಲು ಸೊಚ್ಚೆದು ಗಜಪತೀಂದ್ರ!
ತೆರಚಿಸಿಲು ಕುಕ್ಕ ಸೊಚ್ಚಿನತೆರಗು ದೋಪ.

ರಾಯರಿಗೆಲ್ಲ ಗಂಡನೆನಿಸಿದ ಕೃಷ್ಣದೇವರಾಯನ ಪಟ್ಟದಾನೆ ಬಂದು ನಿನ್ನ ರಾಜಧಾನಿ ಆರಟ್ಲಕೋಟೆಯನ್ನು ತನ್ನ ಉಗುರಿನಿಂದ ಚಿವುಟಿಹಾಕಿದಾಗ, ಸಂಪೆಟವಂಶದ ಆ ಸಾರ್ವಭೌಮನು ಸಿಂಹಾದ್ರಿಯನ್ನು ಜಯಿಸಿದಾಗ, ಆ ಸಿಂಹವಿಕ್ರಮನು ಬಂದು ನಿನ್ನ ಊರಿನ ಕಂಚಿನ ಬಾಗಿಲುಗಳನ್ನು ಒಡೆಯಿಸಿದಾಗ, ಶ್ರೇಷ್ಠತರವಾದ ಗಂಡಪೆಂಡೆಯವನ್ನು ಕೊಟ್ಟು ಆ ರಾಯರ ಗಂಡನಿಗೆ ನಿನ್ನ ಮಗಳನ್ನೊಪ್ಪಿಸಿದಾಗ, ಗಜಪತೀಂದ್ರ! ನಿನಗೆ ಮೈಮೇಲೆ ಎಚ್ಚರವಿರಲಿಲ್ಲವೋ, ಸತ್ತಿದ್ದೆಯೋ, ಅಥವಾ ತಲೆಕೆಟ್ಟು ಎಲ್ಲಿಯಾದರೂ ಓಡಿಹೋಗಿದ್ದೆಯೋ? ಈಗ, ಬಾಗಿಲು ತೆರೆದ ಮನೆಯೊಳಕ್ಕೆ ನಾಯಿ ನುಗ್ಗುವಂತೆ, ಕನ್ನಡದೇಶಕ್ಕೆ ಹೇಗೆ ಪ್ರವೇಶಿಸುತ್ತೀಯೆ?

ಸಮಸ್ಯಾಪೂರಣವು ತೆಲುಗು ಕವಿಗಳಿಗೆ ಪ್ರೀತಿಯ ಕೆಲಸ. ಯಾವನಾದರೊಬ್ಬ ಕವಿಯು ಪದ್ಯದ ಒಂದು ಭಾಗವನ್ನು ಹೇಳಿದರೆ ಉಳಿದ ಕವಿಗಳು ಮಿಕ್ಕ ಮೂರು ಪಾದಗಳನ್ನು ಹೊಂದಿಸಿ ಹೇಳದಿದ್ದರೆ ಸಮಸ್ಯೆ ಕೊಟ್ಟವನೇ ಗೆದ್ದಹಾಗೆ. ತೆನ್ನಾಲರಾಮಕೃಷ್ಣನು ಇತರ ಕವಿಗಳೊಡನೆ ರಾಯರ ಸಭೆಯಲ್ಲಿ ಕುಳಿತಿರುವಾಗ ಯಾರೋ ಒಬ್ಬ ತರುಣ ಕವಿಯು ಬಂದು "ಕುಂಜರಯೂಥಂಬು ದೋಮಕುತ್ತುಕ ಸೊಚ್ಚೆನ್" (ಆನೆಗಳ ಹಿಂಡು ಸೊಳ್ಳೆಯ ಕತ್ತಿನಲ್ಲಿ ಹೊಕ್ಕವು) ಎಂಬ

---

† ಶ್ರೀಕೃಷ್ಣದೇವರಾಯನು 'ಸಂಪೆಟ' ವಂಶಕ್ಕೆ ಸೇರಿದವನು. ಪೆಂಡೆಯವೆಂಬುದು ರುಳಿಯಂಥ ಆಭರಣ. ಅದನ್ನು ಧರಿಸುವವನು ಮಿಕ್ಕೆಲ್ಲರನ್ನು ಗೆಲ್ಲಲು ಸಿದ್ಧನಾಗಿರಬೇಕು. ಈಗಲೂ ಕುಸ್ತಿ ನಡೆಯುವ ಕಡೆಗೆ ಯಾರಾದರೂ ಕಾಲಿಗೆ ಹುಲ್ಲುಪೆಂಡೆಯ ಹಾಕಿಕೊಂಡು ಬಂದರೆ ಅವನು ಮಿಕ್ಕೆಲ್ಲ ಜಟ್ಟಿಗಳನ್ನೂ ಮೂದಲಿಸಿದಂತೆ ಭಾವಿಸುವರು.

ಸಮಸ್ಯೆಯನ್ನು ಕೊಟ್ಟನಂತೆ. ಮಹಾಕವಿಗಳೆಲ್ಲರೂ ಇರುವಾಗ ತರುಣನೊಬ್ಬನು ಹೀಗೆ ಸಮಸ್ಯೆ ಕೊಟ್ಟದ್ದು ರಾಮಕೃಷ್ಣನಿಗೆ ಸಹಿಸಲಿಲ್ಲ. ಒಡನೆಯೇ ಅವನು ಈ ಪದ್ಯವನ್ನು ಹೇಳಿದ ನಂತೆ:

ಗಂಜಾಯಿ ತ್ರಾಗಿ ತುರಕಲ
ಸಂಜಾತುಲಗೂಡಿ ಕಲ್ಲು ಚವಿಗೊನ್ನಾವಾ
ಲಂಜಲಕೊಡುಕಾ ಏಟಿಕಿ
ಕುಂಜರಯೂಥಂಬು ದೋಮಕುತ್ತುಕ ಸೊಚ್ಚೆನ್ ॥

ಗಾಂಜಾ ಸೇದಿ ತುರುಕರ ಮಕ್ಕಳೊಂದಿಗೆ ಸೇರಿ ಹೆಂಡದ ಸವಿ ಕಂಡಿದ್ದೀಯಾ?–ಮಗನೆ, ಆನೆ ಹಿಂಡು ಸೊಳ್ಳೆ ಕತ್ತಿನೊಳಕ್ಕೆ ಏಕೆ ಹೋಯಿತೊ?

ದುರಾಗ್ರಹ ದೂಷಿತವಾದ ಈ ಸಮಸ್ಯಾ ಪೂರಣ ವಿಧಾನವನ್ನು ಕಂಡು ರಾಯರಿಗೆ ಸಿಟ್ಟುಬಂತು. ಅವರು ರಾಮಕೃಷ್ಣನನ್ನು ದಂಡಿಸಿದರು. ಆಗ ಅವನು ರಾಯರ ಸಂತೋಷಾರ್ಥವಾಗಿ ಈ ಪದ್ಯವನ್ನು ಹೇಳಿದನಂತೆ:

ರಂಜನಚೆಡಿ ಪಾಂಡವು ಲರಿ
ಭಂಜನುಲೈ ವಿರಟು ಗೊಲ್ವ ಬಾಲ್ಪಡಿ ರಕಟಾ
ಸಂಜಯ! ಏಮನಿ ಚೆಪ್ಪುದು
ಕುಂಜರಯೂಥಂಬು ದೋಮಕುತ್ತುಕ ಸೊಚ್ಚೆನ್ ॥

ಅರಿಭಂಜನರಾದ ಪಾಂಡವರು ದುರ್ದೈವದಿಂದ, ಗತಿಗೆಟ್ಟು ಸಾಮಾನ್ಯನಾದ ವಿರಾಟನ ಸೇವೆಗೆ ನಿಲ್ಲಬೇಕಾಯಿತಲ್ಲವೆ? ಅಯ್ಯೋ ಸಂಜಯ! ನಾನು ಏನು ಹೇಳಲಿ, ಕುಂಜರಯೂಥವು ಹೋಗಿ ಸೊಳ್ಳೆಯ ಕತ್ತಿನಲ್ಲಿ ಸೇರಿದಂತಾಗಿದೆ.

ಒಂದು ದಿನ ತೆನ್ನಾಲ ರಾಮಕೃಷ್ಣನು ಇತರ ಕವಿಗಳೊಡನೆ ರಾಯರ ಸಭೆಯಲ್ಲಿ ಕುಳಿತಿರುವಾಗ ರಾಯರ ಭಾವಮೈದುನನಾದ ತಿರುಮಲರಾಯನು ಕವಿಗಳು ಅಸ್ವಾಭಾವಿಕವೂ ಅಸಂಗತವೂ ಅಸಂಭವವೂ ಆದ ಸಂಗತಿಗಳನ್ನು ವರ್ಣಿಸುವರೇ ಹೊರತು ಇದ್ದುದನ್ನು ಇದ್ದಹಾಗೆ ವರ್ಣಿಸುವ ಶಕ್ತಿಯೇ ಅವರಿಗಿಲ್ಲವೆಂದು ಆಕ್ಷೇಪಿಸಿದನು. ಒಡನೆಯೇ ತೆನ್ನಾಲ ರಾಮಕೃಷ್ಣನು ಈ ಪದ್ಯ ಕಟ್ಟಿದನಂತೆ:

> ಅನ್ನಾತಿ ಗೂಡ ಹರುಡಗು
> ನನ್ನಾತಿನಿ ಗೂಡಕುನ್ನ ನಸುರಗುರುಂಡಾ
> ನನ್ನಾ! ತಿರುಮಲರಾಯುಡು
> ಕನ್ನೊಕ್ಕಟಿ ಲೇದುಗಾನಿ ಕಾಮುಡುಗಾಡೇ ॥

ಹೆಂಡತಿಯ ಜತೆಯಲ್ಲಿದ್ದಾಗ ತಿರುಮಲರಾಯನು ಸಾಕ್ಷಾತ್ ಮುಕ್ಕಣ್ಣ. ಹೆಂಡತಿ ಜತೆಯಲ್ಲಿರದೆ ಒಬ್ಬನೆ ಇದ್ದಾಗ ಅವನು ಶುಕ್ರಾಚಾರ್ಯ. ಅಣ್ಣಾ, ನಮ್ಮ ತಿರುಮಲರಾಯನು—ಒಂದು ಕಣ್ಣಿಲ್ಲವೇ ಹೊರತು—ಕಾಮಣ್ಣನೇ ಅಲ್ಲವೆ! ರಾಮಕೃಷ್ಣನ ಈ 'ಸ್ವಭಾವೋಕ್ತಿ'ಯನ್ನು ಕೇಳಿದ ತಿರುಮಲರಾಯನು ಅಂದಿನಿಂದ ಕವಿಗಳ ತಂಟೆ ಬಿಟ್ಟನೆಂದು ಕಥೆ

ರಾಯರ ಆಸ್ಥಾನಕ್ಕೆ ಅನೇಕ ಕವಿಗಳು ಬಂದು ಮನ್ನಣೆ ಹೊಂದುತ್ತಿದ್ದರು. ಹಾಗೆಯೇ ಅನೇಕ ಕವಿನಾಮಧಾರಕರೂ ಬರುತ್ತಿದ್ದರು. ರಾಮಕೃಷ್ಣನು ಈ ಕವಿನಾಮಧಾರಿಗಳ ಕಾಟಕ್ಕೆ ಬೇಸತ್ತು ಯಾವುದೋ ಸಂದರ್ಭದಲ್ಲಿ ಹೀಗೆ ಹೇಳಿದ್ದಾನೆ:

> ಕವಿ ಯಲ್ಲಸಾನಿಪೆದ್ದನ
> ಕವಿ ತಿಕ್ಕನಸೋಮಯಾಜಿ ಗಣುತಿಂಪಂಗಾ

ಗವಿ ನೇನು ರಾಮಕೃಷ್ಣುಡ
ಗವಿಯನು ನಾಮಂಬು ನೀರುಕಾಕಿಕಿ ಲೇದೇ ॥

ಅಲ್ಲಸಾನಿ ಪೆದ್ದನ ಕವಿ. §ತಿಕ್ಕನ ಸೋಮಯಾಜಿ ಕವಿ. ಲೆಕ್ಕಕ್ಕೆ ನಾನೂ ಕವಿ. ನೀರು ಕಾಗೆಗೆ ಕವಿಯೆಂಬ ಹೆಸರಿಲ್ಲವೆ?

ಮುಂದಿನ ಎರಡು ಪದ್ಯಗಳಲ್ಲಿ ಯಾವನೋ ಕವಿ ತಿಂಡಿಪೋತನೊಬ್ಬನನ್ನು ಹಾಸ್ಯಮಾಡಿದ್ದಾನೆ. ಇವುಗಳನ್ನು ಶ್ರೀನಾಥನೇ ರಚಿಸಿದನೆಂದೂ ಹೇಳುವುದುಂಟು :

ಮಾ ಕಲಿದಿಂಡಿಕಾಮಯಕುಮಾರಕುಡನ್ನಿಟ ದಂಡ್ರಿವೈಖರೇ
ಕಾಕ ತದನ್ಯ ಮೆಟ್ಲಗುನು ? ಗಾಡಿದಕುಂ ತುರಗಂಬು ಪುಟ್ಟುನೇ
ಚೇಕೊನಿ ಕೊಂಕಿನಕ್ಕಕುನು ಸಿಂಗಮು ಪುಟ್ಟುನೆ ಮಾಲಕಾಕಿಕಿಂ
ಗೋಕಿಲಪುಟ್ಟುನೆ ಚಿಱುತಕುಕ್ಕಕು ಮತ್ತಗಜಂಬು ಪುಟ್ಟುನೇ ?

ನಮ್ಮ 'ಕಲಿದಿಂಡಿ' ಕಾಮಯ್ಯನ ಮಗನು ಎಲ್ಲದರಲ್ಲಿಯೂ ತಂದೆಯ ವೈಖರಿಯೇ! ಹಾಗಲ್ಲದೆ ಬೇರೆ ಹೇಗಾದಾನು ? ಕತ್ತೆಯ ಹೊಟ್ಟೆಯಲ್ಲಿ ಕುದುರೆ ಹುಟ್ಟುವುದೆ ? ನರಿಯ ಹೊಟ್ಟೆಯಲ್ಲಿ ಸಿಂಹ ಹುಟ್ಟುತ್ತದೆಯೆ ? ಕಾಗೆಗೆ ಕೋಗಿಲೆ ಹುಟ್ಟೀತೆ ? ಕೀಳುನಾಯಿಗೆ ಮದ್ದಾನೆ ಹುಟ್ಟೀತೆ ?

ಗ್ರಾಮಮು ಚೇತನುಂಡಿ ಪರಿಕಲ್ಪಿತ ಧಾನ್ಯಮುಸಿಂಟನುಂಡಿ
ರಾಮಕಟಾಕ್ಷವೀಕ್ಷಣಪರಂಪರಚೇ ಗಡತೇಱಿಗಾಕ ಮಾ
ರಾಮಯಮಂತ್ರಿ ಭೋಜನಪರಾಕ್ರಮ ಮೇಮನಿ ಚೆಪ್ಪವಚ್ಚುನಾ
ಸ್ವಾಮಿಯೆಱುಂಗು ತತ್ಕಬಳಚಾತುರಿ ತಾಳಫಲಪ್ರಮಾಣಮುನ್.

§ ತಿಕ್ಕನ ಸೋಮಯಾಜಿ ತೆಲುಗುಭಾರತದ ಬಹುಭಾಗವನ್ನು ಬರೆದ ಮಹಾಕವಿ. ಕ=ನೀರು, ವಿ=ಪಕ್ಷಿ, ಕವಿ=ನೀರುಹಕ್ಕಿ.

ಗ್ರಾಮ ಕೈವಶವಾಗಿದ್ದು, ಮನೆಯಲ್ಲಿ ಧಾನ್ಯ ಸಿದ್ಧವಾಗಿದ್ದು, ಶ್ರೀರಾಮಕಟಾಕ್ಷವೀಕ್ಷಣಪರಂಪರೆಯೂ ಇದ್ದುದರಿಂದ ಹೇಗೋ ಗಡ್ಡೆ (ದಡ) ಹತ್ತಿದ. ನಮ್ಮ ರಾಮಯ್ಯ ಮಂತ್ರಿಯ ಭೋಜನ ಪರಾಕ್ರಮವನ್ನು ಏನೆಂದು ಹೇಳೋಣ? ಆ ತಾಳ ಫಲಪ್ರಮಾಣದ ಕವಳಗಳನ್ನು ನುಂಗುವ ಆ ಜಾಣತನ ಆ ಸ್ವಾಮಿಗೇ ಗೊತ್ತು!

ಬಮ್ಮೆರ ಪೋತನನೆಂಬ ಕವಿಯು ಭಾಗವತವನ್ನು ತೆಲುಗಿನಲ್ಲಿ ಬರೆದನು. ಈತನು ಶ್ರೀಮಂತನಲ್ಲ. ಉದರಪೋಷಣೆಗಾಗಿ ಪೋತನನು ವ್ಯವಸಾಯವನ್ನು ಮಾಡುತ್ತಿದ್ದನು. ಶ್ರೀನಾಥನು ಈತನ ಭಾವಮೈದುನನು.[1] ಅವನು ರಾಜಾಸ್ಥಾನದಲ್ಲಿದ್ದು ಶ್ರೀಮಂತನಾಗಿದ್ದನು. ಅವನಿಗೆ ಬಡವನಾದ ಪೋತನನನ್ನು ಕಂಡರೆ ಹಾಸ್ಯ. ಒಂದು ದಿನ ಶ್ರೀನಾಥನು ಪಲ್ಲಕ್ಕಿಯಲ್ಲಿ ಕುಳಿತು ಬರುತ್ತಿದ್ದಾಗ ದಾರಿಯ ಪಕ್ಕದಲ್ಲಿ ಉಳುತ್ತಿದ್ದ ಪೋತನನನ್ನು ಕಂಡು ಪಲ್ಲಕ್ಕಿಯಿಂದಿಳಿದು 'ಹಾಲಿಕರು ಸುಖವಾಗಿದ್ದೀರಾ? ಎಂದು ಪರಿಹಾಸಪೂರ್ವಕವಾಗಿ ಪ್ರಶ್ನಿಸಿದನಂತೆ. ಆದಕ್ಕೆ ಪೋತರಾಜನು ಹೀಗೆ ಉತ್ತರಕೊಟ್ಟಿದ್ದಾನೆ:

**ಬಾಲರಸಾಲನವಪಲ್ಲವ ಕೋಮಲ ಕಾವ್ಯಕನ್ನಿಕನ್**
**ಗೂಳುಲಕಿಚ್ಚಿ ಯಪ್ಪಡುಪುಕೂಡು ಭುಜಿಂಚುಟಕಂಟೆ ಸತ್ಕವುಲ್**
**ಹಾಲಿಕುಲೈನನೇಮಿ ಗಹನಾಂತರಸೀಮಲ ಗಂದಮೂಲಿಕಾ**
**ದ್ದಾಲಿಕುಲೈನ ನೇಮಿ ನಿಜದಾರಸುತೋದರ ಪೋಷಣಾರ್ಥಮೈ ॥**

---

[1] **ಶ್ರೀನಾಥನೂ ಬಮ್ಮೆರ ಪೋತನನೂ ಬಂಧುಗಳೆಂಬುದು ಜನಶ್ರುತಿ. ಇವರು ಬೇರೆ ಬೇರೆ ಕಾಲದವರೆಂದು ವಿದ್ವಾಂಸರ ಅಭಿಪ್ರಾಯ. ಇದು ಹೇಗೇ ಇದ್ದರೂ ಈ ಕಥೆ ಪೋತನನ ಮನೋವೃತ್ತಿಯನ್ನು ಚೆನ್ನಾಗಿಯೂ ಯಥಾರ್ಥವಾಗಿಯೂ ವರ್ಣಿಸುತ್ತದೆ.**

ಎಳೆಯಮಾವಿನ ಚಿಗುರಿನಂತೆ ಕೋಮಲವಾದ ಕಾವ್ಯ ಕನ್ನಿಕೆಯನ್ನು ಖೂಳರಿಗೆ ಕೊಟ್ಟು ಅದರಿಂದ ಲಭಿಸುವ ನೀಚವಾದ ಕೂಳನ್ನು ತಿನ್ನುವುದಕ್ಕಿಂತ ಸತ್ಕವಿಗಳು ತಮ್ಮ ಹೆಂಡತಿ ಮಕ್ಕಳ ಪೋಷಣೆಗಾಗಿ ಹಾಲಿಕ (ಬೇಸಾಯಗಾರ) ರಾದರೂ ಸರಿಯೆ, ಕಂದಮೂಲಗಳನ್ನು ಕಿತ್ತು ತಿನ್ನುವವರಾದರೂ ಸರಿಯೆ.

ಇನ್ನೊಂದು ಸಲ ಶ್ರೀನಾಥನು ಭಾಗವತಕಾವ್ಯವನ್ನು ಯಾವನಾದರೂ ಅರಸನಿಗೆ ಅಂಕಿತಕೊಟ್ಟರೆ ಬೇಕಾದ ಭಾಗ್ಯ ಲಭಿಸುವುದೆಂದು ಹೇಳಿ ಪೋತನನನ್ನು ರಾಜಾಸ್ಥಾನಕ್ಕೆ ಕರೆದುಕೊಂಡು ಹೋಗುವ ಪ್ರಯತ್ನಮಾಡಿದನು. ಆ ಸಮಯದಲ್ಲಿ ಸರಸ್ವತಿ ಪೋತನನ ಎದುರಿನಲ್ಲಿ ನಿಂತು ಕಣ್ಣೀರುಹಾಕುತ್ತಿದ್ದಂತೆ ಕಾಣಿಸಿತಂತೆ! ಆಗ ಪೋತನನು ಸರಸ್ವತಿಗೆ ಹೀಗೆ ಅಭಯಪ್ರದಾನಮಾಡಿದ್ದಾನೆ :

**ಕಾಟುಕಕಂಟಿನೀರು ಚನುಕಟ್ಟುಪಯಿಂ ಬಡ ನೇಲ ಯೇಡ್ಚೆದೋ**
**ಕೈಟಭದೈತ್ಯಮರ್ದನುನಿ ಗಾದಿಲಿಕೋಡಲ! ಯೋಮದಂಬ! ಯೋ**
**ಹಾಟಕುಗರ್ಭುರಾಣಿ! ನಿನು ನಾಕಟಿಕಿಂಗೊನಿಪೋಯಿ ಯಲ್ಲ ಕ**
**ರ್ಣಾಟ[1] ಕಿರಾಟ ಕೀಚಕುಲ ಕಮ್ಮ ದ್ರಿಶುದ್ಧಿಗ ನಮ್ಮು ಭಾರತೀ ॥**

ಓ ಭಾರತೀ, ಮದಂಬೆ! ನೀನು ಕಣ್ಣಿನ ಕಾಡಿಗೆ ಕರಗುವಂತೆ ಏಕೆ ಅಳುವೆ? ಹಸಿವಿಗಾಗಿ ನಿನ್ನನ್ನು ಆ ಕರ್ಣಾಟ ಕಿರಾತ ಕೀಚಕರಿಗೆ ನಾನು ಮಾರುವುದಿಲ್ಲ! ನೀನು ಖಂಡಿತವಾಗಿಯೂ ನಂಬು.

---

[1] ಆ ಕಾಲಕ್ಕೆ ವಿಜಯನಗರದಲ್ಲಿ ಕನ್ನಡರಾಜರು ಆಳುತ್ತಿದ್ದರು. ಶ್ರೀನಾಥನು ಧನಾಗಮತೃಷ್ಣೆಯಿಂದ ರಾಜರಿಗೂ ಕೋಮಟಿಗಳಿಗೂ ಇತರರಿಗೂ ಕಾವ್ಯಗಳನ್ನು ಅಂಕಿತಕೊಟ್ಟಿದ್ದಾನೆ. ಅದನ್ನು ಇಲ್ಲಿ ಆಕ್ಷೇಪಿಸಲಾಗಿದೆ.

ಒಂದು ದಿನ ಶ್ರೀಕೃಷ್ಣದೇವರಾಯನು ತನ್ನ ಬಾಗಿಲು ಕಾಯುತ್ತಿದ್ದ ತಿಮ್ಮನೆಂಬ ಒಬ್ಬ ದಂಡನಾಯಕನಿಗೆ ಬಹಳ ಬೆಲೆ ಬಾಳುವ ರೇಷ್ಮೆವಸ್ತ್ರವೊಂದನ್ನು ಬಹುಮಾನವಾಗಿ ಕೊಟ್ಟನು. ಅವನು ಅದನ್ನು ಹೊದ್ದುಕೊಂಡು ತನ್ನ ಮನೆಯ ಮುಂದೆ ಕುಳಿತಿರಲು ಆ ಬೀದಿಯಲ್ಲೇ ಹೋಗುತ್ತಿದ್ದ, ಅಲ್ಲ ಸಾನಿಪೆದ್ದನ, ಭಟ್ಟುಮೂರ್ತಿ, ರಾಮಕೃಷ್ಣ ಮುಂತಾದವರು ತಿಮ್ಮನಾಯಕನನ್ನು ಕಂಡು ನಿಂತು ಅವನನ್ನು ಪ್ರಶಂಸೆ ಮಾಡ ತೊಡಗಿದರು. ಆಗ ಅವನ ಮೇಲೆ ಒಂದು ಪದ್ಯ ಕಟ್ಟಬೇ ಕೆಂಬ ಆಸೆಯಿಂದ ಹಿರಿಯನಾದ ಅಲ್ಲಸಾನಿಪೆದ್ದನನು “ ವಾಕಿಟಿ ಕಾವಲಿತಿಮ್ಮಾ ” (ಬಾಗಿಲು ಕಾಯುವ ತಿಮ್ಮಾ) ಎಂಬ ಒಂದು ಪಾದವನ್ನು ಹೇಳಿದನು. ಅವನು ಇನ್ನು ಮುಂದಕ್ಕೆ ಹೇಳುವುದ ರೊಳಗಾಗಿ ರಾಯರ ಆಸ್ಥಾನ ಕವಿಗಳಲ್ಲೊಬ್ಬನಾದ ನಂದಿತಿಮ್ಮ ನ್ನನು “ಪ್ರಾಕಟಮುಗ ಸುಕವಿವರುಲ ಪಾಲಿಟಿಸೊಮ್ಮಾ” (ಸುಕವಿಗಳ ಪಾಲಿನ ಸ್ವತ್ತೆಂದು ಪ್ರಸಿದ್ಧನಾದವನೆ!) ಎಂಬ ಎರಡನೆಯ ಪಾದವನ್ನು ಹೇಳಿದನು. ಆಗ ಭಟ್ಟುಮೂರ್ತಿಯು ಎದ್ದು “ ನೀಕೀಪದ್ದೆಮುಕೊಮ್ಮಾ” (ನಿನಗೆ ಈ ಪದ್ಯವೇನು ಒಂದು ಕೋಡೆ?) ಎಂಬ ಮೂರನೆ ಪಾದವನ್ನು ನುಡಿದನು. ಕೊನೆಯಲ್ಲಿ ತೆನ್ನಾಲರಾಮಕೃಷ್ಣನು “ ನಾಕಾಪಚ್ಚಡಮೆ ಚಾಲು ನಯಮುಗ ನಿಮ್ಮಾ ” (ನನಗೆ ಆ ಹಚ್ಚಡವೇ ಸಾಕು, ಪ್ರೀತಿ ಯಿಂದ ಕೊಡಯ್ಯಾ) ಎಂದು ಹೇಳಿ ಪದ್ಯವನ್ನು ಪೂರ್ತಿಮಾ ಡಿದನಂತೆ! ಈ ನಾಲ್ಕು ಕವಿಗಳಿಂದ ನಿರ್ಮಿತವಾದ ಈ ತನ್ನ ‘ ಸ್ತೋತ್ರ’ ದ ಪದ್ಯಕ್ಕೆ ಸಂತೋಷಪಟ್ಟ ತಿಮ್ಮದಂಡನಾಯಕನು ಕೊನೆಯಲ್ಲಿ ಭಾವಪ್ರಕಟನ ಮಾಡಿದ ರಾಮಕೃಷ್ಣನಿಗೆ ತಾನು ಅಂದು ಪಡೆದಿದ್ದ ವಸ್ತ್ರವನ್ನು ಪಾರಿತೋಷಕವಾಗಿ ಕೊಟ್ಟು

ಮಿಕ್ಕ ಕವಿಗಳಿಗೆ ಬೇರೆ ಮರ್ಯಾದೆ ಮಾಡಿದನು!

ಪುಲ್ಲ ಕವಿಯು ಯಾವುದೋ ರಾಜಾಸ್ಥಾನಕ್ಕೆ ಹೋಗಿದ್ದಾಗ ಅಲ್ಲಿನ ಪಂಡಿತರು ಆತನಿಗೆ ಎಷ್ಟು ಮಾತ್ರವೂ ಅವಕಾಶ ಸಿಕ್ಕದಂತೆ ಮಾಡಿದರು. ಆಗ್ರಹಗೊಂಡ ಪುಲ್ಲ ಕವಿಯು ಅವರ ಪರಸ್ಪರಪ್ರಶಂಸಾಪದ್ಧತಿಯನ್ನು ಹೀಗೆ ಖಂಡಿಸಿದ್ದಾನೆ:

ಕೋಣಂಗಿ ನಾಟ್ಯಮುಲ್ ಕ್ರೋತು ಲಾಡಿಂಚಗಾ
ನೂರಬಂದುಲು ಸಭ ನುನ್ನಯಟ್ಲು
ಗೂಬಕೂತಲು ವಿನಿ ಗುವ್ವಲು ತಲಲೂಚಿ
ಪೋಯಿ ಕಾಕುಲಯೊದ್ದ ಪೊಗಡಿನಟ್ಲು

ಕಾಲುವದರಿನುಂಡಿ ಕಪ್ಪ ಲಂಕಿಂಚಗಾ
ನೆಂಡ್ರಕಾಯುಲು ತಲಲೆತ್ತಿನಟ್ಲು
ಎನುಬೋತುಬಿರುದುಲು ಮನುಬೋತು ಪೊಗಡಂಗ
ಮೇಲುಮೇಲನಿ ಗೊಱ್ಱೆ ಮೆಚ್ಚಿನಟ್ಲು

ಓಗುವಗಿಡೀಲು ತಮಲೋನ ನೊಕರಿ ನೊಕರು
ಮೆಚ್ಚುಕೊನುಚುಂದು ರೆಟುವಂಟ್ಟಿಪಿಚ್ಚಿತನಮೊ
ಮೇಲುಮ್ಯೇ ಲೆಟ್ಟಿ ಗುಣಮು ಕಲ್ಪಿಂಚಿನಾಡು
ಫುಲ್ಲಕವಿ ನೇಲು ಗೋಪಿಕಾವಲ್ಲಭುಂಡು ॥

ಕೋತಿಗಳು ಕೋಣಗಳಿಂದ ನಾಟ್ಯಮಾಡಿಸುವಾಗ ಊರ ಹಂದಿಗಳು ಸಭೆಯಲ್ಲಿದ್ದಂತೆ, ಗೂಬೆಯ ಕೂಗುಗಳನ್ನು ಕೇಳಿ ಗುಬ್ಬಚ್ಚಿಗಳು ತಲೆದೂಗಿ ಹೋಗಿ ಕಾಗೆಗಳ ಬಳಿ ಹೊಗಳಿದಂತೆ, ಕಾಲುವೆ ಬಳಿಯಿಂದ ಕಪ್ಪೆಗಳು ವಟಗುಟ್ಟಿದಾಗ

ಏಡಿಗಳು ತಲೆಯೆತ್ತಿದಂತೆ, ಕೋಣನ ಬಿರುದುಗಳನ್ನು ಹಂದಿ ಹೊಗಳಿದಾಗ ಲೇಸುಲೇಸೆಂದು ಕುರಿ ಮೆಚ್ಚಿದಂತೆ, ಈ ಅಯೋಗ್ಯರು ತಮ್ಮ ತಮ್ಮಲ್ಲಿಯೇ ಒಬ್ಬರನ್ನೊಬ್ಬರು ಮೆಚ್ಚಿ ಕೊಳ್ಳುತ್ತಿದ್ದಾರೆ. ಎಂಥ ಹುಚ್ಚುತನ ! ಅಥವಾ, ನಮ್ಮ ಪುಲ್ಲ ಕವಿಯ ಸ್ವಾಮಿಯಾದ ಆ ಗೋಪಿಕಾ ವಲ್ಲಭನು ಎಂಥ ಗುಣ ವನ್ನು ಕಲ್ಪಿಸಿದ್ದಾನೆ ! ಭಲೆ ಭಲೆ !

ತಮಗೆ ಉಪಚಾರ ಮಾಡದ ಲೋಭಿಗಳನ್ನು ದೂಷಿಸು ವುದು ಹೇಗೆ ಕವಿಗಳಿಗೆ ಸ್ವಾಭಾವಿಕವೋ ತಮಗೆ ಮನ್ನಣೆ ಮಾಡಿದ ದಾತೃಗಳನ್ನು ಹೊಗಳುವುದೂ ಹಾಗೆಯೇ ಸ್ವಾಭಾ ವಿಕ. ಅನೇಕವೇಳೆ ಕವಿಗಳು ಉತ್ಸಾಹದ ಭರದಲ್ಲಿ ಮಿತಿಮೀರಿ ಹೊಗಳುವುದೂ ಉಂಟು. ಅನವೇಮನೆಂಬ ರಾಜನ ಕೀರ್ತಿಯ ವರ್ಣನೆಯನ್ನು ಕೇಳಿ :

**ಕೊಂಚಪು ಜಗಮುಲ ಲೋಪಲ**
**ನಂಚಿತಮುಗ ನೀದು ಕೀರ್ತಿಯನವೇಮನೃಪಾ ।**
**ಮಿಂಚೆನು ಕರಿಮುಕುರಂಬುನ**
**ಬಂಚಾಕ್ಷರಿಲೋನ ಶಿವುಡು ವೆಲಸಿನ ಭಂಗಿನ್ ॥**

ಓ ಅನವೇಮನೃಪಾ, ದೊಡ್ಡದಾದ ಆನೆಯು ಕನ್ನಡಿಯಲ್ಲಿ ಪ್ರತಿಬಿಂಬಿತವಾದಂತೆ, ಶಿವನು ಪಂಚಾಕ್ಷರಿಯಲ್ಲಿ ಅಡಗಿರು ವಂತೆ, ನಿನ್ನ ಅಪಾರವಾದ ಕೀರ್ತಿಯು ಈ ಕೊಂಚವಾದ ಜಗತ್ತುಗಳಲ್ಲಿ ಅಡಗಿದೆ.

ಸುಮಾರು ಕಿ. ಶ. ೧೫೧೨-೧೫೪೩ ರ ವೇಳೆಯಲ್ಲಿ ಗೋ ಲ್ಕೊಂಡದಲ್ಲಿ ರಾಜ್ಯಭಾರ ಮಾಡುತ್ತಿದ್ದ ಮಲ್ಲಿಕ್ ಇಬ್ರಾಹಿಂ ದೊರೆಯು ಆಂಧ್ರಭಾಷಾಭಿಮಾನಿಯಾಗಿ ಕವಿಪೋಷಕನಾಗಿ

ದ್ದನು.† ಆತನ ಔದಾರ್ಯಕ್ಕೆ ಮೆಚ್ಚಿದ ಕವಿಗಳು ಆತನನ್ನು ಪರಿಪರಿಯಾಗಿ ಹೊಗಳಿದ್ದಾರೆ:

ರಾಮುಡು ದುಕ್ಕಿಮುಚ್ಚು, ರಘುರಾಮುಡು ಕ್ರೋತುಲರಾಜು, ರೇಣುಕಾ
ರಾಮುಡು ಪೋಟುಬಂಟು, ಪಟುರಾಗಸಮಂಚಿತುಡೈನ ಗೋಪಿಕಾ
ರಾಮುಡು ವೆರ್ರಿಗೊಲ್ಲಡಿಕ ರಾಪ್ಪಮುಲಂದು ಸಮಾನುಲೇರಯಾ
ರಾಮುಲನೆಂಚಿಚೂಡ ನಿಭರಾಮ ಮಹೀಧವ! ಭವ್ಯವೈಭವಾ ||

ಬಲರಾಮನು ನೇಗಿಲ ಆಳು; ರಘುರಾಮನು ಕೋತಿಗಳ ದೊರೆ. ಆ ರೇಣುಕಾರಾಮ (ಪರಶುರಾಮ)ನು ಜಗಳ ಗಂಟಿ, ಪ್ರೇಮಮಯನಾದ ಆ ಗೋಪಿಕಾರಾಮನು ಹುಚ್ಚುಗೊಲ್ಲ. ಇನ್ನು ಲೋಕದ ರಾಮರನ್ನು ಎಣಿಸಿ ನೋಡಿದರೆ ಭವ್ಯವೈಭವನಾದ ಇಭರಾಮ ಮಹೀಧವನಿಗೆ ಸಮಾನರು ಯಾರಿದ್ದಾರೆ!

ಮಲಿಕಿಭರಾಮಭೂಪ! ಮಹಿಮಂಡಲರಾಜಕುಲಪ್ರದೀಪ! ನೀ
ಪಲುಕು ಶಿಲಾಕ್ಷರಂಬಿತರಪಾರ್ಥಿವ ಕೋಟುಲ ಪಲ್ಕುಲನ್ನಿಯುನ್
ಜಲಲಿಪುಲೆಂಡಮಾವುಲು......ಬೂಡಿದಪ್ರೊಲ್ಲು, ನೀರುಬು
ಗ್ಗುಲು ವಡಗಳ್ಳು......ಶಾರದಮೇಘಜಾಲಮುಲ್ ||

ಓ ಮಲ್ಕಿಭರಾಮ ಭೂಪ! ಮಹೀಮಂಡಲ ರಾಜಕುಲ ಪ್ರದೀಪ! ನಿನ್ನ ಮಾತು ಶಿಲಾಕ್ಷರಗಳಿದ್ದಂತೆ. ಇತರ ರಾಜ ಸಮೂಹದ ಮಾತುಗಳೆಲ್ಲ ನೀರಿನಲ್ಲಿ ಬರೆದ ಅಕ್ಷರಗಳು, ಬಿಸಿ

† ಅದ್ದಂಕಿ ಗಂಗಾಧರನೆಂಬ ಕವಿಯು 'ತಪತೀಸಂವರಣ' ವೆಂಬ ಕಾವ್ಯವನ್ನು ಬರೆದು ಈತನಿಗೆ ಅಂಕಿತಮಾಡಿದ್ದಾನೆ. ಪೊನ್ನಕಂಟಿ ತೆಲಂಗನಾರ್ಯನು ಬರೆದ 'ಯಯಾತಿ ಚರಿತ್ರ' ವೂ ಈತನಿಗೆ ಅಂಕಿತ.

ಲ್ಲುಗ್ಗುದುರೆಗಳು, ಬೂದಿ ಕಸಗಳು, ನೀರಗುಳ್ಳಿಗಳು, ಆಲಿ ಕಲ್ಲು ಗಳು, ಶರತ್ಕಾಲದ ಮೋಡಗಳು.

ಈ ಇಭರಾಮನು ದಿವಂಗತನಾಗಲು ಆಶ್ರಿತನಾದ ಕವಿಯೊಬ್ಬನು ಹೇಳಿದ ಚರಮಶ್ಲೋಕ :

ರಾರ ವಿಧಾತ, ಯೋರಿವಿನರಾ, ತಗುರಾ ತಲಕೊಟ್ಲಮಾರಿ ! ನಿ
ಸ್ಸಾರಪು ಲೋಭಿರಾಜುಲನು ಜಂಪಕ ಮಲ್ಕಿಭರಾಮಭೂವರುನ್
ಜಾರುಯಶೋಧನುನ್ ಸುಗುಣಿ ಜಂಪಿತಿ ವರ್ಥುಲ ಕೇಮಿದಿಕ್ಕುರಾ
ಚೇರಿಕ ನಿಂತರಾಜುನು ಸೃಜಿಂಪಗ ನೀತರಮಾ ವಸುಂಧರನ್ ॥

ಎಲಾ ತಲೆಗಡಿಕನಾದ ವಿಧಾತ! ಏನು ಅನರ್ಥಮಾಡಿಬಿಟ್ಟೆ! ಇಲ್ಲಿ ಬಾ, ಕೇಳು. ನಿಸ್ಸಾರರಾದ ಲೋಭಿ ರಾಜರನು ಕೊಲ್ಲದೆ ಯಶೋಧನನಾದ, ಸದ್ಗುಣಿಯಾದ, ಮಲ್ಕಿಭರಾಮ ಭೂವರನನ್ನು ನೀನು ಕೊಲ್ಲಬಹುದೆ? ಇನ್ನು ಯಾಚಕರಿಗೆ ಯಾರು ದಿಕ್ಕು? ಇಂಥ ರಾಜನನ್ನು ಸೃಷ್ಟಿಮಾಡಲು ಇನ್ನು ನಿನ್ನಿಂದ ಸಾಧ್ಯವೆ?

ಈ ಮಲ್ಕಿಭರಾಮನ ಕಾಲದಲ್ಲಿಯೇ ಕೊಂಡವೀಡು ಎಂಬ ಗ್ರಾಮದಲ್ಲಿ ಬಾಚಮರಸು ಎಂಬ ಒಬ್ಬ ಪಾಳೆಯಗಾರನಿದ್ದನು. ಗೋಪನನೆಂಬ ಒಬ್ಬ ಕವಿಯು ಈ ಇಬ್ಬರು ಪ್ರಭುಗಳನ್ನೂ ಸಂದರ್ಶಿಸಿದಾಗ ಇವರಿಬ್ಬರಲ್ಲಿ ಯಾರು ಶ್ರೇಷ್ಠರೆಂಬ ವಿಷಯ ದಲ್ಲಿ ಅವನಿಗೆ ಸಂದೇಹ ಬಂತು. ಅದನ್ನೇ ಈ ಪದ್ಯದಲ್ಲಿ ಹೇಳಿದ್ದಾನೆ :

ಗೋಲಕೊಂಡಮಲಿಕ ಗೋವುಲ ಭಕ್ಷಿಂಚು
ಗೊಂಡವೀಟಿ ವಿಪ್ರಕುಲಮುನೆಲ್ಲ
ಬಾಚಮರಸುಚೇರಿ ಭಕ್ಷಿಂಚುಚುನ್ನಾಡು
ಮಲಿಕಮೇಲೋ ಬಾಚಮರಸು ಮೇಲೋ ॥

ಗೋಲಕೊಂಡದ ದೊರೆಯಾದ ಮಲಿಕಿಭರಾಮನು ಗೋವುಗಳನ್ನು ಭಕ್ಷಿಸುತ್ತಾನೆ. ಕೊಂಡವೀಡಿನ ವಿಪ್ರರನ್ನೆಲ್ಲ ಈ ಬಾಚಮರಸು ಸೇರಿಕೊಂಡು ತಿಂದುಹಾಕುತ್ತಿದ್ದಾನೆ. ಇವರಿಬ್ಬರಲ್ಲಿ ಯಾರು ಮೇಲು? ಮಲ್ಕಿಭರಾಮನೆ, ಬಾಚಮರಸನೆ?

ಕೋನಮರಸು ಎಂಬ ಪ್ರಭುರೆಡ್ಡಿಯೊಬ್ಬನನ್ನು ಆಶ್ರಿತ ಕವಿಯು ಬಹಳ ಚಮತ್ಕಾರವಾಗಿ ವರ್ಣಿಸಿದ್ದಾನೆ:

**ಚೇಪಟ್ಟಿನ ಧ್ರುವುಲವುದುರು**
**ಕೋಪಿಂಚಿನ ರಂಭಗೂಡುಕೊಂಪುರು ಜಗತಿನ್**
**ಸ್ಥಾಪಿಂಪ ಬೊಡುವನೇರನಿ**
**ಯೀಪಂದಲು ಸಾಳ್ವಕೋನಮುರುಸುನಕೆನಯೇ ॥**

ಕೋನಮರಸು ಕೈಹಿಡಿದರೆ ಜನರು ಅಮರರಾಗುತ್ತಾರೆ. ಅವನು ಕೋಪಿಸಿದರೆ ರಂಭೆಯ ಸನ್ನಿಧಿಗೆ ಸೇರುತ್ತಾರೆ (ಸಾಯುತ್ತಾರೆ). ಸಂರಕ್ಷಿಸಲೂ ಯುದ್ಧಮಾಡಲೂ ಕೈಲಾಗದ ಈ ಹೇಡಿಗಳು ಸಾಳ್ವಕೋನಮರಸನಿಗೆ ಎಣೆಯಾದಾರೆ?

'ವಿನುಕೊಂಡ' ಎಂಬ ಪಟ್ಟಣದಲ್ಲಿ ಭಾಸ್ಕರಮಂತ್ರಿಯೆಂಬ ಪ್ರಸಿದ್ಧನಾದ ದಾತನೊಬ್ಬನಿದ್ದನು. ಅನೇಕ ಕವಿಗಳು ಅವನಿಂದ ಬೇಕಾದ ಪ್ರೋತ್ಸಾಹವನ್ನು ಪಡೆದರು. ಆತನ ಔದಾರ್ಯವನ್ನು ಹೊಗಳುವ ಪದ್ಯಗಳನೇಕವಾಗಿವೆ:

ಪನ್ನಿದ್ದರುಭಾಸ್ಕರುಲನಿ
ಯೆನ್ನಿಕಸೇಯುಟದಿ ಕಲ್ಲ ಯಿದ್ದ'ಱುಗಾವಾ
ಮಿನ್ನುನನೊಕಭಾಸ್ಕರುಡುನು
ಬನ್ನುಗ ವಿನುಕೊಂಡನುನ್ನ ಭಾಸ್ಕರುಡುನ್ ॥

ದ್ವಾದಶಸೂರ್ಯರೆಂದು ಹೇಳುವುದು ತಪ್ಪು. ಇಬ್ಬರೇ

ಅಲ್ಲವೆ? ಆಕಾಶದಲ್ಲಿ ಒಬ್ಬ ಸೂರ್ಯ, ವಿನುಕೊಂಡನಗರದಲ್ಲಿ ಒಬ್ಬ.

ಕರಮುಲು ವೇಯುನುಂ ಗಲುಗಗಾ ಫಲ ಮೇಮಿಟೂನರ್ಚು ಭಾಸ್ಕರುಂ
ಡರುಲನುವೇಡುಕೊಂಚು ದಿರುಗಾಡು ಬಂಗರುಕೊಂಡಚುಟ್ಟು ಶ್ರೀ
ಕರುಡಗು ಭಾಸ್ಕರೇಂದ್ರುಕುಲಗಣ್ಯುಡು ರಾಯನಿಭಾಸ್ಕರನ್ನವೇ
ಕರಮುಲು ಯಾಚಕಾಂಬುಜವಿಕಾಸಕರಂಬುಲು ಶ್ರೀಕರಂಬುಲುನ್ ‖

ಸೂರ್ಯನಿಗೆ ಸಾವಿರ ಕೈಗಳಿದ್ದು ತಾನೇ ಏನು ಫಲ? ಅವನು ಮೇರುಪರ್ವತದ ಸುತ್ತಲೂ ತಿರುಗುತ್ತಿರುತ್ತಾನೆ. ಸೂರ್ಯವಂಶಸಂಭೂತನಾದ ಭಾಸ್ಕರೇಂದ್ರನವೇ ಕೈಗಳು. ಏಕೆಂದರೆ ಅವು ಯಾಚಕರೆಂಬ ಕಮಲಗಳು ಅರಳುವಂತೆ ಮಾಡುತ್ತವೆ; ಸಂಪತ್ತನ್ನು ಕೊಡುತ್ತವೆ.

ಈ ರಾಯನಭಾಸ್ಕರನಿಗೆ ಔದಾರ್ಯವು ಸಹಜಗುಣ; ಅದು ಕಲಿತದ್ದಲ್ಲ. ಆದ್ದರಿಂದಲೇ ಅವನು 'ಇಲ್ಲ' ಎಂಬ ಮಾತನ್ನು ಎಂದೂ ಆಡಲೇ ಇಲ್ಲ. ಕೊನೆಗೆ ಅವನು ಅಕ್ಷರಾಭ್ಯಾಸಮಾಡುವಾಗ ಕೂಡ 'ಇಲ್ಲ' ಎಂದು ಬರೆಯುತ್ತಿರಲಿಲ್ಲವಂತೆ!

ಚೇಕೊನಿ ರಾಯನಿ ಬಾಚಡು
ಕಾಕಾಲು ಗುಣಿಂಚು ಪಿದಪಕಾಲಮುನಾಡೇ
ಲಾಕೇತ್ವ ಮಿಯ್ಯನೇರಡು
ದಾಕುನು ಕೊಮ್ಮಿಯ್ಯಡಿಟ್ಟ ಧನ್ಯುಲುಗಲರೇ?

ಇನ್ನೂ ಕಾಗುಣಿತ ಕಲಿಯುತ್ತಿದ್ದ ಕಾಲದಲ್ಲಿಯೇ ಭಾಸ್ಕರನು 'ಲ' ಕ್ಕೆ ಏತ್ವವನ್ನು ಕೊಡುತ್ತಿರಲಿಲ್ಲ. 'ದ' ಕ್ಕೆ ಕೊಂಬನ್ನು ಕೊಡುತ್ತಿರಲಿಲ್ಲ. ಲಕಾರಕ್ಕೆ ಏತ್ವಕೊಟ್ಟರೆ 'ಲೇ'

ಆಯಿತು. ದಕಾರಕ್ಕೆ ಕೊಂಬುಕೊಟ್ಟರೆ 'ದು' ಆಯಿತು. ಎರಡೂ ಸೇರಿದರೆ 'ಲೇದು' ಎಂದರೆ 'ಇಲ್ಲ' ವೆಂದರ್ಥ— ಹೀಗೆ 'ಇಲ್ಲ' ಎಂಬ ಮಾತೇ ಸರಿಬೀಳದ ಧನ್ಯರು ಯಾರಿದ್ದಾರೆ?

---

## ೩. ವೀರಕಥೆ

### ಖಡ್ಗ ತಿಕ್ಕನ

ಈಗ ನೆಲ್ಲೂರೆಂದು ಹೆಸರಾಗಿರುವ ಪಟ್ಟಣಕ್ಕೆ ಹಿಂದೆ ವಿಕ್ರಮಸಿಂಹಪುರವೆಂಬ ಹೆಸರಿತ್ತು. ಅಲ್ಲಿ ಬಹಳ ವಿಕ್ರಮಶಾಲಿಯಾದ ಮನುಮಸಿದ್ಧಿರಾಯನು ರಾಜ್ಯಭಾರಮಾಡುತ್ತಿದ್ದನು. ಆತನ ಆಸ್ಥಾನದಲ್ಲಿ ತಿಕ್ಕನನೆಂಬ ಬ್ರಾಹ್ಮಣನು ದಂಡಾಧಿಪತಿಯಾಗಿದ್ದನು. ಹೀಗಿರುವಾಗ ಕನಿಗಿರಿ ಸಂಸ್ಥಾನದ ಕಾಟಮರಾಜನಿಗೂ ಮನುಮಸಿದ್ಧಿರಾಜನಿಗೂ ಯಾವುದೋ ಕಾರಣದಿಂದ ಯುದ್ಧ ಸಂಭವಿಸಿತು. ಆಗ ದಂಡನಾಥ ತಿಕ್ಕನನು ಸೈನ್ಯಸಮೇತನಾಗಿ ಹೋಗಿ ಬಹಳ ಧೈರ್ಯದಿಂದ ಹೋರಾಡಿದನು. ಆದರೆ ಶತ್ರುಸೈನ್ಯಾಧಿಪತಿಯು ಬಹಳ ಬಲಿಷ್ಠನೂ ಚತುರನೂ ಆಗಿದ್ದುದರಿಂದ ವಿಧಿಯಿಲ್ಲದೆ ಹಿಂದಕ್ಕೆ ಬರಬೇಕಾಯಿತು. ಹೀಗೆ ಹಿಮ್ಮೆಟ್ಟಿ ಬಂದ ಈ ದಂಡನಾಥನಿಗೆ ವಿಕ್ರಮಸಿಂಹಪುರದಲ್ಲಿ ಪುರಸ್ಕಾರವಿಲ್ಲದೆ ಹೋಯಿತು. ರಾಜನೂ ಅಲಕ್ಷ್ಯಮಾಡಿದನು. ಕೊನೆಗೆ ಸ್ವಗೃಹವನ್ನು ಸೇರಿದಮೇಲೂ ತಿಕ್ಕನನಿಗೆ ಶಾಂತಿ ದೊರಕಲಿಲ್ಲ. ಏಟುಮಾತು ಪೋಟುಮಾತುಗಳು ಕೇಳಬಂ

ದುವು. ತಾಯಿ, ಹೆಂಡತಿ ಸಹ ಎಕ್ಕಸಕ್ಕದ ಮಾತುಗಳನ್ನಾಡಿದರು. ಕೊನೆಗೆ ಅವನು ಸ್ನಾನಕ್ಕೆ ಹೋದಾಗ ಅವನ ಹೆಂಡತಿಯು ಬಿಸಿನೀರ ಕೊಡವನ್ನು ತಂದಿಟ್ಟು ಹೆಂಗಸರಿಗೆ ಹೇಗೋ ಹಾಗೆ ಒಂದು ಹುರಿಮಂಚವನ್ನು ಅಡ್ಡವಿಟ್ಟು* ಅರಿಸಿನದ ಉಂಡೆಯನ್ನು ತಂದಿಟ್ಟಳಂತೆ! ಇದೆಲ್ಲವನ್ನೂ ನೋಡಿ ತಿಕ್ಕನನು ವ್ಯಸನಪಟ್ಟು ಇವೇಕೆಂದು ಕೇಳಲು,

ಪಗಱಕು ವೆನ್ನಿಚ್ಚಿನಚೋ
ನಗರೇ ನಿನು ಮಗತನಂಪು ನಾಯಕು ಲೆಂದುನ್
ಮುಗು ರಾಡವಾರ ಮ್ಮೈತಿಮಿ
ವಗಪೇಟಿಕಿ ಜಲಕಮಾಡವಚ್ಚಿನಚೋಟನ್ ॥

ಹಗೆಗಳಿಗೆ ಬೆನ್ನುತೋರಿಸಿವರೆ ನಿನ್ನನ್ನು ನೋಡಿ ಶೂರರಾದ ನಾಯಕರು ನಗುವುದಿಲ್ಲವೆ? ನಾವು† ಮೂವರು ಹೆಂಗಸರಾದೆವು. ಇನ್ನು ಸ್ನಾನಮಾಡಬಂದಕಡೆ ನಾಚಿಕೆಯೇಕೆ?

ಸ್ನಾನಮಾಡಿದ ಮೇಲೆ ತಿಕ್ಕನನು ಊಟಕ್ಕೆ ಕುಳಿತನು. ಅವನ ತಾಯಿಯು ಭೋಜನಾಂತ್ಯದಲ್ಲಿ ಒಡೆದ ಹಾಲನ್ನು ಬಡಿಸಿದಳು. ತಿಕ್ಕನನು "ಹಾಲೇಕೆ ಒಡೆದಿದೆ?"ಯೆಂದು ಕೇಳಲು ಆಕೆಯು ಹೀಗೆ ಉತ್ತರಕೊಟ್ಟಳಂತೆ:

---

*ಬಹಳ ಬಿಸಿಲುದೇಶವಾದ್ದರಿಂದ ಈ ಪ್ರಾಂತ್ಯ ತಣ್ಣೀರುಸ್ನಾನವೇ ವಾಡಿಕೆ. ಸಾಮಾನ್ಯವಾಗಿ ಬಾವಿಯ ಬಳಿ ಬಯಲಿನಲ್ಲಿಯೇ ಸ್ನಾನ. ಹೆಂಗಸರು ಸ್ನಾನಮಾಡಬೇಕಾದರೆ ಒಂದು ಹುರಿಮಂಚವನ್ನು ಅಡ್ಡ ನಿಲ್ಲಿಸುವುದುಂಟು.

† ತಿಕ್ಕನನ ತಾಯಿ, ಅವನ ಹೆಂಡತಿ, ತಿಕ್ಕನ, ಒಟ್ಟು ಮೂವರು.

ಅಸವ್ರಶಮುಗ ನರಿವೀರುಲ
ಮಾಸಿಪುಚ್ಛಕ ವಿಱಿಗಿವಚ್ಚು ಮಾಗಪಂದಕ್ರಿಯನ್
ಗಸವ್ರುನ್ ಮೇಯಗ ಬೋಯಿನ
ಪಸುಲುನ್ ವಿಱಿಗಿನವಿ ತಿಕ್ಕ! ಪಾಲುನ್ ವಿಱಿಗೆನ್ ||

ಶತ್ರು ವೀರರನ್ನು ಅವಮಾನಗೊಳಿಸದೆ ಎದೆಯೊಡೆದು ಹಿಂತಿರುಗಿಬರುವ ಗಂಡು ಹೇಡಿಯ ಕಾರಣದಿಂದ ಹುಲ್ಲುಮೇಯಲು ಹೋಗಿದ್ದ ಹಸುಗಳೂ ಬೆನ್ನೊಡೆದು ಬಂದಿವೆ. ಆದ್ದರಿಂದ ಹಾಲೂ ಒಡೆದಿದೆ!

ಈ ಅಪಮಾನವನ್ನು ಸಹಿಸಲಾರದೆ ಸ್ವಭಾವತಃ ವೀರನಾದ ತಿಕ್ಕನನು ಪುನಃ ಯುದ್ಧರಂಗಕ್ಕೆ ಹೋಗಿ ಭಯಂಕರ ಆವೇಶದಿಂದ ಹೊಡೆದಾಡಿ ತನ್ನ ಅರಸನಿಗೆ ವಿಜಯವನ್ನು ಸಂಪಾದಿಸಿದನಾದರೂ ಯುದ್ಧದಲ್ಲಿ ಮಡಿದನು. ಆಮೇಲೆ ಈ ವೀರನನ್ನು ಕುರಿತು ಪ್ರಜೆಗಳು ಹೀಗೆ ಹೊಗಳತೊಡಗಿದರಂತೆ:

ಧೈರ್ಯಂಬು ನೀಮೇನ ದಗಿಲಿಯುಂಡುಟ ಜೇಸಿ
  ಚಲಿಯಿಂಚಿ ಮಂದರಾಚಲಮು ತಿರಿಗೆ
ಗಾಂಭೀರ್ಯಮೆಲ್ಲ ನೀಕಡನ ಯುಂಡುಟ ಜೇಸಿ
  ಕಾಕುತ್ಸ್ಥುಚೇ ವಾರ್ಧಿ ಕಟ್ಟುವಡಿಯೆ
ಜಯಲಕ್ಷ್ಮಿ ನೀಯುರಸ್ಥಲಿನ ಯುಂಡುಟ ಜೇಸಿ
  ಹರಿ ಪೋಯಿ ಬಲಿ ದಾನ ಮಡುಗುಕೊನಿಯೆ
ಆಕಾರಮೆಲ್ಲ ನೀಯಂದ ಯುಂಡುಟಜೇಸಿ
  ಮರುಡು ಚಿಚ್ಚುನ ಬಡಿ ಮಡಿಸಿ ಚನಿಯೆ

ದಿಕ್ಕದಂಡನಾಥ! ದೇವೇಂದ್ರಪುರಿಕಿ ನೀ
ವರುಗುಟೆಱಿಗಿ ನಗವು ತಿರುಗುಟುಡುಗು
ನಬ್ಧಿ ಕಟ್ಟುವಿಡುಚು ನಚ್ಯುತು ಕೊದ ವಾನು
ಮರುಡಡು ಮರಲ ಗಲುಗು ಮಗಲರಾಜ!

ಗಂಡರ ಗಂಡ, ತಿಕ್ಕದಂಡನಾಥ! ಧೈರ್ಯವೆಲ್ಲ ನಿನ್ನಲ್ಲಿ ಸೇರಿಕೊಂಡಿದ್ದುದರಿಂದ ಮಂದರಾಚಲವು ನಾಚಿಕೆಯಿಂದ ಚಲಿಸಿ ತಿರುಗಿತು. ಗಾಂಭೀರ್ಯವೆಲ್ಲ ನಿನ್ನಲ್ಲಿಯೇ ಇದ್ದುದರಿಂದ ಸಮುದ್ರವು ಶ್ರೀರಾಮನಿಂದ ಕಟ್ಟುಬಿದ್ದಿತು. ಜಯಲಕ್ಷ್ಮಿಯು ಬಂದು ನಿನ್ನ ಎದೆಯಲ್ಲಿ ನೆಲೆಸಿದುದರಿಂದ ಹರಿಯು ಹೋಗಿ ಬಲಿಚಕ್ರವರ್ತಿಯಲ್ಲಿ ದಾನಬೇಡಿದನು. ಆಕಾರಸೌಂದರ್ಯವೆಲ್ಲ ನಿನ್ನಲ್ಲಿಯೇ ಇದ್ದುದರಿಂದ ಮನ್ಮಥನು ಕಿಚ್ಚಿಗೆ ಬಿದ್ದು ಸತ್ತನು. ಆದರೆ ಈಗ ನೀನು ದೇವೇಂದ್ರನ ರಾಜಧಾನಿಗೆ ಹೋದ ವಾರ್ತೆ ಕೇಳಿ ಮಂದರವು ತಿರುಗುವುದನ್ನು ಬಿಟ್ಟುಬಿಡುವುದು, ಸಮುದ್ರವು ಕಟ್ಟನ್ನು ಕಳೆದುಕೊಳ್ಳುವುದು; ಮಹಾವಿಷ್ಣು ತನ್ನ ಕೊರತೆಯನ್ನು ಕಳೆದುಕೊಳ್ಳುವನು; ಮನ್ಮಥನು ಮತ್ತೆ ರೂಪುಗೊಳ್ಳುವನು.

ವೇಮುಲವಾಡ ಭೀಮಕವಿಯು ತನ್ನ ಕಾಲದಲ್ಲಿ ಮಹಾವೀರನೆಂದು ಪ್ರಸಿದ್ಧನಾಗಿದ್ದ ವೈಲಮಭೀಮನೆಂಬ ದಂಡನಾಯಕನ ಶೌರ್ಯವನ್ನು ಹೀಗೆ ವರ್ಣಿಸಿದ್ದಾನೆ:

ಗರಳಪ್ರಮುದ್ದ ಲೋಹ ಮವಗಾಢಮಹಾಶನಿಕೋಟ್ಲು ಕಮ್ಮಟಲ್
ಹರುನಯನಾಗ್ನಿ ಕೊಲ್ಮಿ ಯುರಗಾಧಿಪಕೋಟಿಲು ಪಟ್ಟುಕಾಲ್ಲ ದಿ
ಕ್ಕರಿಲಯಮುಂಬು ದಾಯಿ ಲಯಕಾಲುಡು ಕಮ್ಮರಿ ವೈರಿವೀರ ಸಂ
ಹರಣ ಗುಣಾಭಿರಾಮುಡಗು ವೈಲಮಭೀಮುನಿ ಖಡ್ಗಸೃಷ್ಟಿಕಿನ್ ॥

ವೈರಿ ವೀರನನ್ನು ಸಂಹಾರಮಾಡುವ ಗುಣದಿಂದ ಮನೋಹರನಾದ ವೈಲಮಭೀಮನ ಖಡ್ಗಸೃಷ್ಟಿಗೆ ಯಮನೇ ಕಮ್ಮಾರ, ಆದಿಶೇಷನ ಕೋರೆಗಳೇ ಇಕ್ಕಳ, ದಿಗ್ಗಜದ ಎದೆಯೇ ಅಡಿಗಲ್ಲು, ಶಿವನ ಹಣೆಗಣ್ಣಿನ ಬೆಂಕಿಯೇ ಕುಲುಮೆ, ವಿಷದ ಮುದ್ದೆಯೇ

ಲೋಹ, ವಜ್ರಾಯುಧವೇ ಸುತ್ತಿಗೆ.

ರಾಜದೇವೇಂದ್ರ, ಆಹವೋಪೇಂದ್ರ, ಹಗಲುಗಗ್ಗೋಲು ರಾಯ ಮುಂತಾದ ಬಿರುದುಗಳನ್ನು ಹೊಂದಿ ಅರಿರಾಯ ವಿಧ್ವಂಸಕನಾಗಿ ಮೈಸೂರಿನ ಕೀರ್ತಿ ದಶದಿಕ್ಕುಗಳಿಗೂ ಹಬ್ಬುವಂತೆ ಮಾಡಿದ ಶ್ರೀಚಿಕ್ಕದೇವರಾಯರ ಶೌರ್ಯಪರಾಕ್ರಮಗಳನ್ನು ವರ್ಣಿಸುವ ಹಲವು ಪದ್ಯಗಳಿವೆ. ಇವುಗಳನ್ನು ಬರೆದ ಕವಿಯಾರೋ ಎಲ್ಲಿಯವನೋ, ತಿಳಿಯದು. ಮಚ್ಚಿಗಾಗಿ ಇಲ್ಲಿ ಒಂದು ಪದ್ಯವನ್ನು ಕೊಟ್ಟಿದೆ.

ಚೂಚಿನ ಜಾಲದಾ ಸುಲ್ತಾನ್ಮಹಮ್ಮದು
  ಪಾದುಸಾಯೆದ ವಾಕು ನೀದುಃಬಾಕು
ಎದಿರಿನ ಜಾಲದಾ ಯಿಕ್ಕೇರಿ ಶಿವ್ವಪ
  ನೇಸಿಪಾಲಿಟಿಮಿತ್ತಿ ನೀದು ಕತ್ತಿ
ಕವಸಿನ ಜಾಲದಾ ಮಧುರ ತಂಜಾವುರೀ
  ನೇತಲ ಪೈದೂಟಿ ನೀದು ಬಾರು
ಮಲಸಿನಜಾಲದಾ ರವಣೆಂಚು ರಾಯ ದು
  ನೇದಾರುಲಕು ಮಾರಿ ನೀದು ಜೂರಿ
ಪರನೃಪತುಲೆಂತ ನೀಯಂತ ದೊರಕು ರಾಯ
ಭೇರಿಕಾಭೂರಿಕಾಹಳಾಭೀಲಮಕರ
ಮರ್ತ್ತುಬಾಂಕುಶದೋನೇಜ ಮಹಿತಬಿರುದ
ರಾಜದೇವೇಂದ್ರ! ಶ್ರೀದೇವರಾಯಚಂದ್ರ!

ನೀನು ಸುಮ್ಮನೆ ನೋಡಿದರೆ ಸಾಕು, ನಿನ್ನ ಬಾಕು ಸುಲ್ತಾನ್ ಮಹಮ್ಮದ್ ಬಾದುಷಾವಿನ ಎದೆಯನ್ನು ತಾಕುತ್ತದೆ. ಇದಿರಾದರೆ ಸಾಕು ನಿನ್ನ ಕತ್ತಿ ಇಕ್ಕೇರಿ ಶಿವಪ್ಪನಾಯ

ಕನ ಪಾಲಿನ ಮೃತ್ಯು. ನೀನು ಸ್ವಲ್ಪ ಆಗ್ರಹಗೊಂಡರೆ ಗಲಭೆ ಮಾಡುವ ಎಲ್ಲ ಪಾಳೆಯಗಾರರಿಗೂ ನಿನ್ನ ಚೂರಿಯೇ ಮಾರಿಯಾಗುತ್ತದೆ. ನಿನ್ನಮೇಲೆ ಬೀಸಿದ ಗಾಳಿ ಸೋಕಿದರೂ ಸಾಕು ಮಧುರೆ, ತಂಜಾವೂರು ಮೊದಲಾದ ನಗರಗಳ ರಾಜರನ್ನು ನಿನ್ನ ತುಬಾಕಿಯ ಗುಂಡು ಭೇದಿಸಿಕೊಂಡು ಹೋಗುತ್ತದೆ. ರಾಜದೇವೇಂದ್ರ, ಶ್ರೀದೇವರಾಯಚಂದ್ರ! ನಿನ್ನಂಥ ದೊರೆಗೆ ಈ ಶತ್ರುರಾಜರು ಯಾವ ಲೆಕ್ಕ?

---

# ೪. ದೇಶವರ್ಣನೆ

ಹಲವು ಕವಿಗಳು ತಾವು ಸಂಚಾರಮಾಡಿದ ದೇಶವನ್ನು ತಮಗೆ ತೋರಿದ ರೀತಿಯಲ್ಲಿ ವರ್ಣನೆಮಾಡಿದ್ದಾರೆ. ಈ ವರ್ಣನೆಗಳು ಅತಿಶಯೋಕ್ತಿಗಳಿಂದ ತುಂಬಿದ್ದರೂ ಅವುಗಳಲ್ಲಿ ಸ್ವಲ್ಪವಾದರೂ ಸತ್ಯವಿಲ್ಲದೆ ಇಲ್ಲ. ಈ ಪದ್ಯಗಳಿಂದ ಆ ಕಾಲದ ತೆಲುಗುದೇಶದ, ಜನರ, ಸ್ಥಿತಿಯನ್ನು ಕೊಂಚಮಟ್ಟಿಗೆ ಊಹಿಸಬಹುದು. ರೇನಾಡು ಎಂಬ ಪ್ರಾಂತ್ಯಕ್ಕೆ ಹೋಗಿದ್ದಾಗ ಭೋಜನರಸಿಕನಾದ ಶ್ರೀನಾಥನು ಹೇಳಿದ ಪದ್ಯವಿದು:

గరళము మ్రింగితి నంచుం
బురహర! గర్వింపబోకు పోపోపో నీ
బిరుదింక గానవచ్చెడి
మెరిసెడి రేనాటిజొన్న మెదుకులు తినుమా ॥

ಓ ತ್ರಿಪುರಾಂತಕ! ಆ ಹಾಲಾಹಲವನ್ನು ನುಂಗಿದೆನೆಂದು ಗರ್ವಿಸಬೇಡ. ರೇನಾಡಿನ ಈ ಜೋಳದ ಅಗುಳುಗಳನ್ನು ತಿಂದವರೆ ನಿನ್ನ ಮಹಿಮೆ ತಿಳಿದೀತು.

ಕಾಟ್ರಾವುಲಪಲ್ಲಿ ಎಂಬ ಗ್ರಾಮದಲ್ಲಿ ಸಿಹಿನೀರಿಗೆ ಅಭಾವ. ಉಪ್ಪುನೀರು ಕುಡಿದು ಅಭ್ಯಾಸವಿಲ್ಲದ ಕವಿ ಆ ಗ್ರಾಮಕ್ಕೆ ಹೋದಾಗ ಹೇಳಿದ ಪದ್ಯವಿದು :

ದೇವಾಸುರುಲಬ್ಧಿ ದರುವ
ನಾವಿರ್ಭೂತಮಯಿ ಹಾಲಾಹಲಮಪುಡು ಮಹಾ
ದೇವುನಕುನ್ ಭೀತಿಲಿ ಕಾ
ಟ್ರಾವುಲಪಲಿ ನೂತುಲಂದು ಡಾಗೆನುಜುಂಡೀ ॥

ದೇವತೆಗಳೂ ರಾಕ್ಷಸರೂ ಸೇರಿ ಕ್ಷೀರಸಮುದ್ರವನ್ನು ಕಡೆದಾಗ ಹಾಲಾಹಲವು ಹುಟ್ಟಿತು. ಆಗ ಮಹೇಶ್ವರನು ಅದನ್ನು ನುಂಗಲು ಪ್ರಯತ್ನಿಸಲು ಆ ವಿಷವು ಹೆದರಿ ಓಡಿಬಂದು ಈ ಕಾಟ್ರಾವುಲಪಲ್ಲಿಯ ಬಾವಿಗಳಲ್ಲಿ ಬಚ್ಚಿಟ್ಟುಕೊಂಡಿತು.

ಗುಂಟೂರು ಜಿಲ್ಲೆಯ ಪೂರ್ವಾರ್ಧಕ್ಕೆ ಪಲ್ನಾಡೆಂದು ಹೆಸರು. ಪಲ್ನಾಡಿನಲ್ಲಿ ಜಲಕ್ಷಾಮ ಹೆಚ್ಚು. ಬಡತನ ಬಹಳ. ಕಾರಣಾಂತರದಿಂದ ಶ್ರೀನಾಥಕವಿಯು ಈ ನಾಡಿಗೆ ಪದೇಪದೇ ಹೋಗಬೇಕಾಯಿತು. ಆತನು ಈ ಪಲ್ನಾಡನ್ನು ವರ್ಣಿಸಿರುವ ವೈಖರಿ ಬಹಳ ಚೆನ್ನಾಗಿದೆ.

ರಸಿಕಡು ಪೋವಡು ಪಲ್ನಾ
ಡೆಸಗಂಗಾ ರಂಭಯ್ಯೆನ ನೇಕುಲೆ ವಡುಕುನ್
ವಸುಧೇಶುಡ್ಡೈನ ದುನ್ನುನು
ಗುಸುಮಾಸ್ತ್ರುಂಡೈನ ಜೊನ್ನಕೂಡೇ ಕುಡುಚುನ್ ॥

ರಸಿಕನಾದವನು ಪಲ್ನಾಡಿಗೆ ಹೋಗಬಾರದು. ಅಲ್ಲಿ ರಂಭೆಯೇ ಆದರೂ ಹತ್ತಿ ನೂಲಬೇಕು. ರಾಜನಾದರೂ ಉಳಬೇಕು. ಸಾಕ್ಷಾತ್ ಮನ್ಮಥನೇ ಆದರೂ ಜೋಳದ ಕೂಳನ್ನೇ ತಿನ್ನಬೇಕು.

ಪಲ್ನಾಡಿನ ಬಡತನವನ್ನು ಎಷ್ಟು ಹೇಳಿದರೂ ಶ್ರೀನಾಥನಿಗೆ ತೃಪ್ತಿಯಿಲ್ಲ. ' ಪಲ್ನಾಡಿಗೆ ಹೋಗುವುದೂ ಕಾಡಿಗೆ (ಶ್ಮಶಾನಕ್ಕೆ) ಹೋಗುವುದೂ ಒಂದೇ ' ಎಂಬರ್ಥ ಬರುವಂತೆ ಒಂದು ಪದ್ಯ ಹೇಳಿದ್ದಾನೆ:

ಅಂಗಡಿ ಯೂರಲೇದು ವರಿಯನ್ನಮುಲೇದು ಶುಚಿತ್ವಮೇಮಿಲೇ
ದಂಗನ ಲಿಂಪುಗಾರು ಪ್ರಿಯಮ್ಮೆನವನಂಬುಲುಲೇವು ನೀಟಿಕೈ
ಭಂಗಪಡಂಗ ಬಾಪ್ಪಡು ಕೃಪಾಪರು ಲೆವ್ವರುಲೇರು ದಾತ ಲೆ
ನ್ನಂಗನು ಸುನ್ನ ಗಾನ ಪಲ್ನಾಟಿಕಿ ಕಾಟಿಕಿ ಪೋವ ನೇಟಿಕಿನ್ ॥

ಊರಲ್ಲಿ ಒಂದು ಅಂಗಡಿಯಿಲ್ಲ. ನೆಲ್ಲಕ್ಕಿಯ ಅನ್ನವಿಲ್ಲ. ಶುಚಿತ್ವವು ಎಷ್ಟು ಮಾತ್ರವೂ ಇಲ್ಲ. ಅಂಗನೆಯರಲ್ಲಿ ಇಂಪಿಲ್ಲ. ಪ್ರಿಯವಾದ ಉದ್ಯಾನಗಳಿಲ್ಲ. ನೀರಿಗಾಗಿ ಕಷ್ಟಪಟ್ಟರೆ ಸಹಾಯ ಮಾಡುವ ಕೃಪಾಪರರು ಯಾರೂ ಇಲ್ಲ. ದಾತರು ಸೊನ್ನೆ. ಇಂಥಾ ಪಲ್ನಾಡಿಗೆ, ಶ್ಮಶಾನಕ್ಕೆ, ಏಕೆ ಹೋಗಬೇಕು ?

---

## ೫. ನೀತಿಯ ಪದ್ಯಗಳು

ಶಿಬಿ, ಬಲಿ ಚಕ್ರವರ್ತಿಗಳಂಥಾ ತ್ಯಾಗಿಗಳು ಅವತಾರ ಮಾಡಿದ ಭರತಭೂಮಿಯಲ್ಲಿ ಲೋಭಿಗಳಿಗೂ ಕೊರತೆಯಿಲ್ಲ.

ಅವರೂ ಬೇಕಾದ ಹಾಗೆ ಅವತಾರವೆತ್ತಿದ್ದಾರೆ. ನಿಷ್ಪಕ್ಷಪಾತಿಗಳಾದ ಕವಿಗಳು ಅವರ ಕೀರ್ತಿಯನ್ನೂ ಕೊಂಚ ಹರಡುವ ಪುಣ್ಯವನ್ನು ಕಟ್ಟಿಕೊಂಡಿದ್ದಾರೆ. ಲೋಭಿಗಳಲ್ಲಿ ಮುಖ್ಯವಾಗಿ ಎರಡು ವಿಧ. ತಾವು ಹಣವನ್ನು ಕೊಡಲು ಮನಸ್ಸು ಒಪ್ಪದಿದ್ದರೂ ಇತರರು ಯಾರಾದರೂ ದಾನಮಾಡಿದರೆ ತೆಗೆದುಕೊಳ್ಳಬಲ್ಲವರು ಒಂದು ಜಾತಿ. ಎರಡನೆಯ ಜಾತಿಯ ಲೋಭಿ ಹಾಗಲ್ಲ. ಅವನಿಗೆ ದಾನಕ್ರಿಯೆಯೇ ಸರಿಬೀಳದು. ಬೇರೆ ಯಾರಾದರೂ ದಾನಮಾಡುತ್ತಿದ್ದರೆ ಅದಕ್ಕೂ ಅಡ್ಡಿಮಾಡುವುದು ಅವನ ಸ್ವಭಾವ. ಇಂಥವರಲ್ಲೊಬ್ಬನಾದ ತುರಗಾರಾಮನ ಕೀರ್ತಿ ಈ ಪದ್ಯದಲ್ಲಿ ವರ್ಣಿತವಾಗಿದೆ.

ಕೋಮಟಿವೇಮನ ತ್ಯಾಗಮು
ಭೂಮಿಪ್ರಸಿದ್ಧಂಬು ಕಲ್ಪಭೂಜಮುಚೆಂತನ್ ।
ಬಾಮುನ್ನಪಗಿದಿದುರಗಾ
ರಾಮುಂಡುನ್ನಾಡು ಚೇರರಾದೆವ್ವರಿಕಿನ್ ॥

ಕೋಮಟಿ ವೇಮನ್ನನ ತ್ಯಾಗವು ಭೂಮಿಯಲ್ಲೆಲ್ಲ ಪ್ರಸಿದ್ಧ. ಆದರೆ ಕಲ್ಪವೃಕ್ಷದ ಬಳಿಯಲ್ಲಿ ಹಾವಿದ್ದ ಹಾಗೆ ಅವನ ಬಳಿಯಲ್ಲಿ ತುರಗಾರಾಮನಿದ್ದಾನೆ. ಯಾರೂ ವೇಮನನನ್ನು ಸಮೀಪಿಸುವುದೇ ಸಾಧ್ಯವಿಲ್ಲ.

ಲೋಭಿಯನ್ನು ಸ್ತೋತ್ರ ಮಾಡಿದರೆ ತಾನೆ ಅವನು ಧಾರಾಳಿಯಾಗುತ್ತಾನೆಯೆ? ಎಂದಿಗೂ ಇಲ್ಲ.

ದಾತಗಾನಿವಾನಿ ಖ್ಯಾತಿಗಾನೆನ್ನಿನ
ದಾತಯೌನೆವಾಡು ಧರಣಿಲೋನ ।
ಗಡ್ಡಿಪರಕ ಪೀಕಿ ಗಂಗನಲ್ಲಾರ್ಚಿನ
ದರ್ಭಯಗುನೆ ಯಜ್ಞತಂತ್ರಮುನಕು ॥

ದಾತನಲ್ಲದವನನ್ನು ಎಷ್ಟು ಹೊಗಳಿದರೂ ಅವನು ದಾನಶೀಲನಾಗುವುದಿಲ್ಲ. ಹುಲ್ಲುಕಡ್ಡಿಯನ್ನು ಕಿತ್ತು ಗಂಗೆಯಲ್ಲಿ ಅಲ್ಲಾಡಿಸಿದರೆ ಅದು ಯಜ್ಞಕಾರ್ಯಕ್ಕೆ ಯೋಗ್ಯವಾದ ದರ್ಭೆಯಾಗುತ್ತದೆಯೆ ?

ಕೊಡಬಲ್ಲ ಸಮರ್ಥರನ್ನು ಕೇಳಬೇಕೇ ಹೊರತು ಬಡವರನ್ನು ಕೇಳಿ ಫಲವಿಲ್ಲವೆಂಬ ಅರ್ಥವು ಈ ಪದ್ಯದಲ್ಲಿ ನಿರೂಪಿತವಾಗಿದೆ :

ಅಡುಗಡಗವಾರಿನಡುಗಳ  
ಬಡುಗಲನಡುಗಂಗ ಲೇಮಿಬಾಪಂಗಲರಾ ।  
ವಡಗಲ್ಲ ಗಟ್ಟುವಡುನಾ  
ಗುಡಿ ರಾಳ್ಳನುಗಟ್ಟಕುನ್ನಗುವ್ವಲಚೆನ್ನಾ ॥

ಕೇಳತಕ್ಕವರನ್ನು ಕೇಳದೆ ಬಡವರನ್ನು ಕೇಳಿದರೆ ನಮ್ಮ ಬಡತನವನ್ನು ಹೋಗಲಾಡಿಸಬಲ್ಲರೆ? ಗುಡಿಯನ್ನು ಕಲ್ಲಿನಲ್ಲಿ ಕಟ್ಟಬೇಕೇ ಹೊರತು ಆಲಿಕಲ್ಲಿನಲ್ಲಿ ಕಟ್ಟಲು ಸಾಧ್ಯವಾದೀತೆ?

ಹೀಗೆಂದ ಮಾತ್ರಕ್ಕೆ ಬಡವನು ಅಪ್ರಯೋಜಕನೆಂದು ತಿಳಿಯಬಾರದು. ಕೆಲವು ಸಂದರ್ಭಗಳಲ್ಲಿ ಬಡವನೇ ವಾಸಿ :

ಕಲಿಮಿಗಲ ಲೋಭಿಕನ್ನನು  
ವಿಲಸಿತಮುಗ ಬೀದಮೇಲು ವಿತರಣಯ್ಯೈನನ್ ।  
ಚಲಿಚಿಲುಮ ಮೇಲುಗಾದಾ  
ಕುಲನಿಧಿಯಂಬೋಧಿಕನ್ನ, ಗುವ್ವಲಚೆನ್ನಾ† ॥

ಐಶ್ವರ್ಯವುಳ್ಳ ಲೋಭಿಗಿಂತ ವಿತರಣಿಯಾದ ಬಡವನೇ ಮೇಲು. ಸಮುದ್ರಕ್ಕಿಂತ ಚಿಲುಮೆ ಮೇಲಲ್ಲವೆ ?

---

† ಗುವ್ವಲಚೆನ್ನ ಎಂಬುದು ಕವಿಯ ಅಂಕಿತ.

ಸಮುದ್ರದಲ್ಲಿ ನೀರು ಹೆಚ್ಚು, ಆದರೆ ಕುಡಿಯುವ ಹಾಗಿಲ್ಲ. ಚಿಲುಮೆಯಲ್ಲಿ ನೀರು ಕೊಂಚವಾದರೂ ಬಹಳ ಸಿಹಿ.

ಬೇಲಿಯೇ ಎದ್ದು ಹೊಲ ಮೇದರೆ ಕಾಪಾಡುವವರು ಯಾರಿದ್ದಾರೆ? ಊರಿನ ಮುಖಂಡರೇ ಅಕಾರ್ಯಕ್ಕೆ ಕೈ ಹಾಕಿದರೆ ತಪ್ಪಿಸುವವರು ಯಾರು ಎಂಬ ಅಭಿಪ್ರಾಯವು ಈ ಪದ್ಯದಲ್ಲಿ ನಿರೂಪಿತವಾಗಿದೆ:

ಸಾಮಜಮು ಚೆರಕು ಮೇಸಿನ
ದೋಮಲು ಪದಿವೇಲು ಚೇರಿ ತ್ರೋಲಂಗಲವಾ
ಗ್ರಾಮಪತಿ ತಗವುದಪ್ಪಿನ
ಗ್ರಾಮಮುಲೋ ನುನ್ನವಾರು ಕಾದನಗಲರಾ ॥

ಆನೆ ನುಗ್ಗಿ ಕಬ್ಬು ಮೇಯ ತೊಡಗಿದರೆ ಹತ್ತು ಸಾವಿರ ಸೊಳ್ಳೆ ಸೇರಿ ಅದನ್ನು ಓಡಿಸಬಲ್ಲವೆ? ಗ್ರಾಮಾಧಿಪತಿಯು ನ್ಯಾಯಕ್ಕೆ ತಪ್ಪಿದರೆ ಗ್ರಾಮದಲ್ಲಿರುವವರು ಅವನನ್ನು ದಂಡಿಸ ಬಲ್ಲರೆ?

ದೊಡ್ಡ ಕುಲದಲ್ಲಿ ಹುಟ್ಟಿದ ಮಾತ್ರದಿಂದ ಯಾರೂ ದೊಡ್ಡ ವರಾಗುವುದಿಲ್ಲ:

ಘನಕುಲಮುನ ಪೊಡಮಿನ ದು
ರ್ಮನುಜಡಿಲ ನಿಂದ್ಯುಡಗು ವಮನ ಮೂರ್ಧ್ವಮುಖಂ
ಬುನವೆಡಲಿ ಮಂಚಿದಗುನಾ
ವಿನುಮುವಹಿತ ಪೊನ್ನುಪಾಟಿ ವೆಂಕಟಮಂತ್ರೀ ॥

ಕೆಟ್ಟಮನುಷ್ಯನು ದೊಡ್ಡ ವಂಶದಲ್ಲಿ ಹುಟ್ಟಿದ ಮಾತ್ರಕ್ಕೇ ಅವನು ಶ್ರೇಷ್ಠನಾಗುವುದಿಲ್ಲ; ನಿಂದ್ಯನೇ ಆಗುತ್ತಾನೆ. ಓ ಪೊನ್ನು ಪಾಡಿನ ವೆಂಕಟ ಮಂತ್ರೀ, ಕೇಳು, ವಾಂತಿಯು ಬಾಯಿಂದ ಹೊರಕ್ಕೆ ಬಂದ ಮಾತ್ರಕ್ಕೇ ಅದು ಒಳ್ಳೆಯದಾಗುತ್ತದೆಯೆ?

ಐಶ್ವರ್ಯ ಅಧಿಕಾರಗಳು ಲಭಿಸಿದ ಮಾತ್ರಕ್ಕೇ ಅಯೋಗ್ಯನು ಉತ್ತಮನಾಗುತ್ತಾನೆಯೆ?

ಇತ್ತಡಿ ಪುತ್ತಡಿಯಗುನಾ
ತೊತ್ತದಿ ನಗಲೆನ್ನಿಯಿಡಿನ ದೊರಸಾನಗುನಾ
ಯುತ್ತಮಕುಲುಡೌನಾ ದೌ
ಲತ್ತುನ ದಾದಿರಿಗಿನನು ಗುಲಾಮು ಗುಲಾಮೇ ॥

ಹಿತ್ತಾಳೆಯು ಚಿನ್ನವಾಗುವುದಿಲ್ಲ. ತೊತ್ತು ಎಷ್ಟು ಒಡವೆಗಳನ್ನು ಹೇರಿಕೊಂಡರೂ ತೊತ್ತೇ ಹೊರತು ರಾಣಿಯಾಗುವುದಿಲ್ಲ. ಗುಲಾಮನಿಗೆ ದೌಲತ್ತು ಸಿಕ್ಕಿ ಹಾರಾಡಿದರೂ ಅವನು ಗುಲಾಮನೇ ಸರಿ.

ಹುಟ್ಟಿದ ಮಕ್ಕಳೆಲ್ಲ ಕುಲೋದ್ಧಾರಕರಲ್ಲ:

ಜಲಚರಮು ಲಬ್ಧಿ ಪೊಡಮುನೆ
ಜಲರಾಶಿಕಿ ಮೋದಕರುಡು ಚಂದ್ರುಂಡೊಕಡೇ
ಕುಲಮುದ್ಧರಿಂಪನೊಕಡೇ
ವಿಲಸದ್ಯಶ! ಪೊನ್ನುಪಾಟಿನೆಂಕಟಮಂತ್ರೀ ॥

ಸಮುದ್ರದಲ್ಲಿ ಜಲಚರ ಪ್ರಾಣಿಗಳೆಷ್ಟು ಹುಟ್ಟುವುದಿಲ್ಲ! ಆದರೆ ಸಮುದ್ರಕ್ಕೆ ಸಂತೋಷದಾಯಕನು ಚಂದ್ರನೊಬ್ಬನೇ. ಆದ್ದರಿಂದ ಒಂದು ವಂಶದಲ್ಲಿ ಅನೇಕ ಮಕ್ಕಳಿದ್ದರೂ ಕುಲೋದ್ಧಾರಕನೊಬ್ಬನೇ ಮಗ.

ಮಾತು ತಪ್ಪಿದವನ ಮರ್ಯಾದೆ:

ಅಡಿನಮಾಟಲು ದಪ್ಪಿನ
ಗಾಡಿದಕೊಡುಕಂಚು ದಿಟ್ಟಗಾ ವಿನಿ ಯಯ್ಯೋ
ವೀಡಾ ನಾಕೊಕ ಕೊಡುಕನಿ
ಗಾಡಿದ ಯೇಡ್ಚೆಂಗದನ್ನ ಘನಸಂಪನ್ನಾ ॥

ಆಡಿದ ಮಾತಿಗೆ ತಪ್ಪಿದವನನ್ನು ಯಾರೋ ' ಕತ್ತೆಯ ಮಗನೇ ' ಎಂದು ಬೈದರು. ಆಗ ಸಮೀಪದಲ್ಲಿದ್ದ ಒಂದು ಕತ್ತೆಯು ಇದನ್ನು ಕೇಳಿ ' ಅಯ್ಯೋ, ಇವನೇ ನನಗೊಬ್ಬ ಮಗ ? ಎಂದು ಅತ್ತಿತಂತೆ. ಅಂಥವನನ್ನು ಮಗನೆಂದು ಒಪ್ಪಿಕೊಳ್ಳಲು ಕತ್ತೆಗೂ ಇಷ್ಟವಿಲ್ಲವೆಂದು ತಾತ್ಪರ್ಯ.

ಕಾರ್ಯಸಾಧಕನ ಲಕ್ಷಣ :

ಚೇತನಗುವಾಡು ಕಾರ್ಯಮು
ಕೈ ತಗ್ಗಿನು ವಂಗುಗಾಕ ಯಲ್ಪುಂಡಗುನಾ
ಏತಮುಃಜಡಿ ದಾಃ ವಂಗುನು
ಪಾತಾಳಮು ನೀರು ದೆಚ್ಚಿ ಬಯಟಂ ಜೆಲ್ಲುನ್ ||

ಶಕ್ತನಾದವನು ಕಾರ್ಯಸಾಧನೆಗಾಗಿ ತಗ್ಗುತ್ತಾನೆಯೇ ಹೊರತು ಅಲ್ಪನಾಗುವುದಿಲ್ಲ. ಏತದ ಮರ ಕೆಳಕ್ಕೆ ಬಗ್ಗಿದರೂ ಪಾತಾಳದ ನೀರನ್ನು ತಂದು ಮೇಲೆ ಚೆಲ್ಲುತ್ತದೆ.

ಅನ್ನದಾನವೇ ದೊಡ್ಡದು :

ಕೋಟಾನುಕೋಟುಲಿಚ್ಚಿನ
ಗೂಟಿಕಿ ಸರಿರಾದು ದೇವಕೋಟುಲು ರಾರಾ
ಪಾಟಿಂಚಿ ಯಜ್ಞವಾಟಿಕಿ
ಗೂಟಿಕಿ ಮಾರೆಲ್ಲಕೊಂಡ ! ಗುಣರತ್ನನಿಧೀ ||

ಕೊಟ್ಯನುಕೋಟಿ ಧನ ಕೊಟ್ಟರೆ ತಾನೆ ಕೂಳಿಗೆ ಸಮನಾದೀತೆ ? ದೇವತೆಗಳು ಕೂಡ ಊಟಕ್ಕಾಗಿ ಯಜ್ಞಶಾಲೆಗೆ ಬರುವುದಿಲ್ಲವೆ ?

ಕನ್ನಡದಲ್ಲಿ ಸರ್ವಜ್ಞನು ಹೇಗೋ ತೆಲುಗಿನಲ್ಲಿ ವೇಮನನು ಹಾಗೆ. ಈತನನ್ನು ವೇಮನಯೋಗೀಂದ್ರನೆಂದೂ ಕರೆಯುವು

ನುಂಟು. ಈ ಕವಿಯ ಪದ್ಯಗಳಿಗೆಲ್ಲ ಪ್ರಾಯಕವಾಗಿ "ವಿಶ್ವದಾಭಿರಾಮ ವಿನರ ವೇಮ" ಎಂಬ ಅಂಕಿತವಿರುತ್ತದೆ. ಈತನ ಪದ್ಯಗಳಿಂದ ಕೆಲವನ್ನು ಇಲ್ಲಿ ಆಯ್ದುಕೊಟ್ಟಿದೆ.

> ಲೋಭಿವಾನಿ ಜಂಪ ಲೋಕಂಬು ಲೋಪಲ
> ಮಂದು ವೇಱುವಲದು ಮತಮು ಗಲದು
> ಪೈಕಮಡುಗ ನತಡು ಭಗ್ಗುರುಮನಿ ಚಚ್ಚು ||

ಲೋಭಿಯನ್ನು ಕೊಲ್ಲುವುದಕ್ಕೆ ಬೇರೆ ಮದ್ದೇ ಬೇಡ; ಅವನನ್ನು ಹಣಕೇಳಿದರೆ ಸಾಕು, ಎದೆಯೊಡೆದು ಸಾಯುತ್ತಾನೆ.

ಬರಿಯ ಬಾಹ್ಯಾಚಾರದಿಂದ ಲಾಭವಿಲ್ಲ; ಅಂತಶ್ಶುದ್ಧಿಯಿದ್ದು ಮಾಡುವ ಕೆಲಸವೇ ಸಾರ್ಥಕ:

> ಆತ್ಮಶುದ್ಧಿ ಲೇನಿ ಯಾಚಾರ ಮದಿಯೇಲ
> ಭಾಂಡಶುದ್ಧಿ ಲೇನಿ ಪಾಕಮೇಲ
> ಚಿತ್ತಶುದ್ಧಿ ಲೇನಿ ಶಿವಪೂಜಲೇಲರಾ
> ವಿಶ್ವದಾಭಿರಾಮ ವಿನರ ವೇಮಾ ||

ಆತ್ಮಶುದ್ಧಿಯಿಲ್ಲದ ಆಚಾರದಿಂದ ಏನು ಪ್ರಯೋಜನ? ಪಾತ್ರೆಯನ್ನು ತೊಳೆಯದೆ ಮಾಡುವ ಅಡಿಗೆಯಂತೆ ಅದು ದಂಡ. ಚಿತ್ತಶುದ್ಧಿಯಿಲ್ಲದೆ ಶಿವನನ್ನು ಎಷ್ಟು ಪೂಜಿಸಿದರೂ ಫಲವಿಲ್ಲ.

ಚಿತ್ತಶುದ್ಧಿಯಿಲ್ಲದೆ ಹಲವು ಪುಣ್ಯಕಾರ್ಯಗಳನ್ನು ಆಚರಿಸುವುದಕ್ಕಿಂತ ಮನಃಪೂರ್ವಕವಾಗಿ ಮಾಡುವ ಒಂದುಕಾರ್ಯವೇ ಹೆಚ್ಚು ಬೆಲೆಯುಳ್ಳದ್ದಂತೆ!

> ಚಿತ್ತಶುದ್ಧಿಗಲಿಗಿ ಚೇಸಿನ ಪುಣ್ಯಂಬು
> ಕೊಂಚೆಮೈನ ನದಿಯು ಗೊದವ ಕಾದು
> ವಿತ್ತನಂಬು ಮಱ್ಱಿ ವೃಕ್ಷಂಬುನಕುನೆಂತ ?

ಆಲದ ಬೀಜ ಚಿಕ್ಕದಾದರೂ ಅದರಿಂದ ಹುಟ್ಟಿ ಬೆಳೆಯುವ ಮರ ಬಹಳ ದೊಡ್ಡದು. ಆದರಂತೆ ಚಿತ್ತಶುದ್ಧಿಯಿಂದ ಮಾಡಿದ ಸ್ವಲ್ಪ ಪುಣ್ಯದಿಂದ ಲಭಿಸುವ ಫಲ ಹೆಚ್ಚು.

ಮನಸ್ಸಿನಲ್ಲಿ ಕಲ್ಮಷವನ್ನಿಟ್ಟುಕೊಂಡು ಮಾಡುವ ತೀರ್ಥಸ್ನಾನ, ಹರಕೆ ಮುಂತಾದುವೆಲ್ಲ ದಂಡ:

ನೀಳ್ಲ ಮುನುಗನೇಲ ನಿಧುಲ ಪೆಟ್ಟಗನೇಲ
ಮೊನಸಿ ವೇಲ್ಪುಲಕುನು ಮ್ರೊಕ್ಕನೇಲ
ಕಪಟಕಲ್ಮಷಮುಲು ಕಡುಪುಲೋನುಂಡಗಾ ||

ಕಾಪಟ್ಯವೇ ಮೊದಲಾದ ಕಲ್ಮಷಗಳು ಹೊಟ್ಟೆಯಲ್ಲಿರುವಾಗ ನೀರಿನಲ್ಲಿ ಮುಳುಗಿ ಏನು ಲಾಭ? ದೇವತೆಗಳಿಗೆ ನಮಸ್ಕರಿಸಿ ಏನು ಫಲ? ಹರಕೆಹೊತ್ತು ದೇವತೆಗಳಿಗೆ ಧನವನ್ನು ಅರ್ಪಿಸಿದರೆತಾನೆ ಏನು ಪ್ರಯೋಜನ?

ತನ್ನಲ್ಲಿಯೇ ಇರುವ ದೈವವನ್ನು ಅರಿತುಕೊಳ್ಳದೆ ದೇವರನ್ನು ಹುಡುಕಿಕೊಂಡು ಅಲೆಯುವುದು ದಡ್ಡತನ:

ತನದುನಾತ್ಮಯುಂದು ದೈವಂಬುಗಲುಗಗ
ತೀರ್ಥಯಾತ್ರಲಕಿಲ ತಿರುಗು ನರುಡು
ಗಂಧಪುದುಂನಕಲ ಗಾಡ್ದೆ ಮೋಸಿನಯಟ್ಲು ||

ತನ್ನ ಆತ್ಮದಲ್ಲಿಯೇ ದೇವರಿರುವಾಗ ಅದನ್ನು ತಿಳಿಯದೆ ತೀರ್ಥಯಾತ್ರೆಗಾಗಿ ಅಲೆಯುವವನು ಎಂದಿಗೂ ದೇವರನ್ನು ಕಾಣಲಾರನು. ಗಂಧದಮರದ ತುಂಡುಗಳನ್ನು ಹೊತ್ತುಕೊಂಡು ತಿರುಗಿದರೆ ತಾನೆ ಕತ್ತೆಗೆ ಅದರ ವಾಸನೆ ತಿಳಿಯುತ್ತದೆಯೆ?

ಸದಾ ತೀರ್ಥಸ್ನಾನ ಮಾಡುತ್ತಿದ್ದರೂ ಮೋಕ್ಷ ಸಿಕ್ಕಲಾರದು :

ನೀಳ್ಳ ಮುನುಗುವಾಡು ನಿರ್ಮಲಾತ್ಮುಡುಗಾಡು
ಪೂರ್ಣವೈನ ಮುಕ್ತಿ ಬೊಂದಲೇಡು
ನೀರುಕೋಡಿ ಯೆಪ್ಪುಡು ನೀಳ್ಳನು ಮುನ್ಗದಾ ॥

ನೀರಿನಲ್ಲಿ ಮುಳುಗುವವನು ನಿರ್ಮಲಾತ್ಮನಾಗುವುದಿಲ್ಲ. ಅವನಿಗೆ ಪೂರ್ಣವಾದ ಮುಕ್ತಿಯೂ ದೊರಕಲಾರದು. ಹಾಗೆ ದೊರಕುವುದಾದರೆ ನೀರುಕೋಳಿಯು ಸದಾ ನೀರಿನಲ್ಲಿಯೇ ಮುಳುಗಿರುವುದಿಲ್ಲವೆ ?

ದೈವಭಕ್ತರಾದವರು ಬರಿಯ ಕಲ್ಲಿನ ದೇವರನ್ನೇ ಪೂಜಿಸಿದರೆ ಸಾಲದು. ಸಮಸ್ತ ಜೀವಿಗಳಲ್ಲಿಯೂ ದೇವರಿರುವನೆಂಬುದನ್ನರಿತು ಜೀವಕಾರುಣ್ಯವನ್ನು ಕಲಿಯಬೇಕೆಂಬ ಅಭಿಪ್ರಾಯವು ಈ ಪದ್ಯದಲ್ಲಿ ನಿರೂಪಿತವಾಗಿದೆ :

ರಾತಿಬೊಮ್ಮಕೇಲ ರಂಗೈನ ವಲುವಲು
ಗುಳ್ಳ ಗೋಪುರಮುಲು ಗುಂಭಮುಲುನು
ಕೂಡುಗುಡ್ಡ ತಾನು ಗೋರುನಾ ದೇವುಡು ?

ಕಲ್ಲುಬೊಂಬೆಗೆ ಅಂದವಾದ ಬಣ್ಣದ ಬಟ್ಟೆಗಳೇಕೆ ? ಗುಡಿಗೋಪುರಗಳು, ಕುಂಭ (ನೈವೇದ್ಯ)ಗಳು ತಾನೇ ಏತಕ್ಕೆ ? ದೇವರೇನು ಕೂಳು ಬಟ್ಟೆಗಳನ್ನು ಕೋರುತ್ತಾನೆಯೆ ?

ವೇಮನ್ನನು ಸಾಂಸಾರಿಕನೀತಿಗಳನ್ನು ವರ್ಣಿಸುವ ಹಲವು ಪದ್ಯಗಳು ಬಹಳ ಮನೋಹರವಾಗಿವೆ.

ಆಲಿವಂಕವಾರ ಲಾತ್ಮಬಂಧುವುಲೈರಿ
ತಲ್ಲಿವಂಕವಾರು ತಗಿನಪಾಟಿ
ತಂಡ್ರಿವಂಕವಾರು ದಾಯಾದುಲೈರಯಾ

ಹೆಂಡತಿಯ ಕಡೆಯವರು ಸ್ವಂತ ನೆಂಟರು. ತಾಯಿಯ ಕಡೆಯವರು ಏನೋ ತಕ್ಕಮಟ್ಟಿಗೆ. ಆದರೆ ತಂದೆಯ ಕಡೆಯವರು ಮಾತ್ರ ದಾಯಾದಿಗಳಾದರಯ್ಯ!

ಹೀಗೆ ಮನುಷ್ಯನು ಹೆಂಡತಿಯ ಮೇಲಿನ ಮೋಹಕ್ಕೋಸ್ಕರ ಮಿಕ್ಕ ಬಂಧುವರ್ಗದವರನ್ನು ಅಸಡ್ಡೆಮಾಡಿ ದುಃಖಕ್ಕೀಡಾಗುವನೆಂಬ ಅರ್ಥವು ಈ ಮುಂದಿನ ಪದ್ಯದಲ್ಲಿ ನಿರೂಪಿತವಾಗಿದೆ:

ಆಲಿಮಾಟಲುವಿನಿ ಯನ್ನದಮ್ಮುಲ ರೋಸಿ
ವೇಱುಪಡುಚುನುಂಡು ವೆಱ್ಱಿಜನುಡು
ಕುಕ್ಕತೋಕಬಟ್ಟಿ ಗೋದಾವರೀದುನು ||

ಹುಚ್ಚುಮನುಷ್ಯನು ಹೆಂಡತಿಯ ಮಾತುಕೇಳಿ ಅಣ್ಣತಮ್ಮಂದಿರಮೇಲೆ ಆಗ್ರಹಗೊಂಡು ಬೇರೆ ಹೋಗುತ್ತಾನೆ. ಇದು ನಾಯಿಯ ಬಾಲಹಿಡಿದುಕೊಂಡು ಗೋದಾವರೀ ಪ್ರವಾಹವನ್ನು ಈಜುವ ಪ್ರಯತ್ನದಂತೆ ಹಾನಿಕರವಾದ ಕೆಲಸ.

ಹೀಗೆ ಹೆಂಡತಿಯ ಮೇಲಿನ ಮೋಹದಿಂದ ಕೆಡುವವರು ಒಂದು ಜಾತಿ. ಇನ್ನೊಂದು ಜಾತಿಯವರು ಇದಕ್ಕೆ ಕೇವಲ ವಿರೋಧ. ಹೆಂಡತಿ ಎಷ್ಟು ಒಳ್ಳೆಯವಳಾಗಿದ್ದರೂ ಅವರಿಗೆ ಅನ್ಯಸ್ತ್ರೀಯಲ್ಲಿಯೇ ಅಪೇಕ್ಷೆ:

ಆಲುರಂಭಯೈನನತಿಶೀಲವತಿಯೈನ
ಜಾರಪುರುಷುಡೇಲ ಜಾಡಮಾನು
ಮಾಲವಾಡ ಕುಕ್ಕ ಮುರುಕಿನಿ ವಿಡುಚುನಾ ||

ಹೆಂಡತಿ ರಂಭೆಯ ಹಾಗೆ ಸುಂದರಿಯಾಗಿದ್ದರೂ ಬಹಳ ಶೀಲವತಿಯಾದರೂ ಜಾರಪುರುಷನು ತನ್ನ ದಾರಿಯನ್ನೇಕೆ ಬಿಡುತ್ತಾನೆ? ಹೊಲೆಯನ ನಾಯಿ ಹೊಲಸನ್ನು ಬಿಡುತ್ತದೆಯೆ?

ಈ ಬಗೆಯಾದ ಕೊರತೆಗಳಿಲ್ಲದಿದ್ದರೆ ಸಂಸಾರಕ್ಕಿಂತಲೂ ಸುಖವಾದದ್ದು ಬೇರೊಂದಿಲ್ಲ:

ಸುಗುಣವಂತುರಾಲು ಸುದತಿಯೈ ಯುಂಡಿನ
ಬುದ್ಧಿಮಂತು ಲಗುಚು ಬುತ್ರುಲೊಪ್ಪ
ಸ್ವರ್ಗಮೇಟಿಕಯ್ಯ ಸಂಸಾರಿಕಿಂಕನು

ಸುಗುಣವತಿಯಾದ ಹೆಂಡತಿ, ಬುದ್ಧಿಶಾಲಿಗಳಾದ ಮಕ್ಕಳು ಇದ್ದರೆ ಇನ್ನು ಸಂಸಾರಿಗೆ ಸ್ವರ್ಗತಾನೆ ಏಕೆ?

ಆದರೆ ಈ ಭಾಗ್ಯ ಎಲ್ಲರಿಗೂ ಹೇಗೆ ದೊರೆಯಬೇಕು? ಸಂಸಾರವಲ್ಲಿ ಯಾವನಾದರೂ ಒಬ್ಬ ಅಯೋಗ್ಯನಿದ್ದುಬಿಡುತ್ತಾನೆ.

ಎಂಡಿನ ಮಾನೊಕಟಡವಿನಿ
ನುಂಡಿನನಂದಗ್ನಿ ಬುಟ್ಟಿ ಯೂಷ್ಟ್ನಸು ಚೆಟ್ಲನ್
ದಂಡಿಗಲ ವಂಶಮೊಲ್ಲನು
ಚಂಡಾಲುಂಡೊಕಡು ಪುಟ್ಟಿ ಚೆಡುಪುನು ಸೇಮಾ ||

ಅಡವಿಯಲ್ಲಿ ಒಣಗಿದ ಮರವೊಂದಿದ್ದರೆ ಅದರಲ್ಲಿ ಬೆಂಕಿ ಹುಟ್ಟಿ ಗಿಡಗಳನ್ನೆಲ್ಲ ಸುಟ್ಟು ನಾಶಮಾಡುತ್ತದೆ. ಅದರಂತೆ ದೊಡ್ಡವಂಶದಲ್ಲಿ ಒಬ್ಬ ಚಂಡಾಲನು ಹುಟ್ಟಿ ಎಲ್ಲವನ್ನೂ ಹಾಳುಮಾಡುತ್ತಾನೆ.

ಕಂಡವರ ಒಡವೆಯನ್ನು ಕಂಡರೆ ಎಂಥವರಿಗೂ ಆಸೆ. ತಾವೇ ಬಹಳ ಸಿರಿವಂತರಾಗಿದ್ದರೂ ಬಡವರಾದ ಇತರರ ವಸ್ತುಗಳನ್ನು ಅಪಹರಿಸುವ ಯೋಚನೆಮಾಡುತ್ತಾರೆ. ಇದು ಮನುಷ್ಯರಿಗೆ ಮಾತ್ರ ಇರುವ ಕೆಟ್ಟಚಾಳಿಯಲ್ಲ ದೇವತೆಗಳೂ ಇದಕ್ಕೆ ಒಳಿದಿದ್ದಾರೆಯಂತೆ!

ಕನಕಪರ್ವತಮುನ ಗಾಪುರಂ ಬುಂಡಿನ
ನನಿಮಿಷೇಶ್ವರುನಕು ನಾಸಪೋದು
ಕನಕ ಕುಂಡಲಮುಲು ಕರ್ಣುನಿ ನಡುಗಡಾ ॥

ಚಿನ್ನದ ಬೆಟ್ಟದಲ್ಲಿಯೇ ವಾಸವಾಗಿದ್ದರೂ ಇಂದ್ರನಿಗೆ ಆಸೆ ಹೋಗಲಿಲ್ಲ. ಅವನು ಕರ್ಣನನ್ನು ಕಂಡು ಅವನ ಚಿನ್ನದ ಕರ್ಣಕುಂಡಲಗಳನ್ನು ಬೇಡಲಿಲ್ಲವೆ?

ಇಂದ್ರನು ಮಾತ್ರವೇ ಅಲ್ಲ; ಆ ಲಕ್ಷ್ಮೀಪತಿಯಾದ ನಾರಾಯಣನಿಗೂ ಈ ದುರಾಸೆ ಹೋಗಲಿಲ್ಲ:

ಪಾಲಸಾಗರಮುನ ಪವ್ವಳಿಂಚಿನಹರಿ
ಗೊಲ್ಲಪಲ್ಲೆ ಪಾಲು ಗೋರನೇಲ
ನೆದುಟಿವಾರಿ ದ್ರವ್ಯಮೆಲ್ಲವಾರಿಕಿನಿ ದೀಪೆ ॥

ಕ್ಷೀರಸಮುದ್ರದಲ್ಲಿಯೇ ಪವ್ವಳಿಸಿರುವ ಶ್ರೀಹರಿಯು ಗೊಲ್ಲರಹಳ್ಳಿಯ ಹಾಲನ್ನು ಕೋರಬಹುದೆ? ಕಂಡವರ ದ್ರವ್ಯವು ಎಲ್ಲರಿಗೂ ಸಿಹಿಯೆ!

ಪಾತ್ರಾಪಾತ್ರವರಿತು ಉಪದೇಶಮಾಡಬೇಕೇ ಹೊರತು ಕಂಡಕಂಡವರಿಗೆಲ್ಲ ಉಪದೇಶಿಸುವ ಯೋಚನೆ ಮಾಡಬಾರದು. ಹಾಗೆ ಮಾಡಿದರೆ ಉಪದೇಶಕರಿಗೇ ಹಾನಿ:

ತನದು ಬಾಗು ಗೋರಿ ಧರ್ಮಂಬು ಸೆಪ್ಪಿನ
ದಿಟ್ಟು ಚುಂದ್ರು ಮೊಟಿಕಾಲೆಟ್ಟಯೊದುಟ
ಗಡ್ಡಿವೇಯು ಪೋಟ್ಲಗೊಡ್ಡು ಕೊಮ್ಮಾಡಿಂಚು ॥

ಅವನ ಕ್ಷೇಮಚಿಂತನೆಯಿಂದಲೇ ಧರ್ಮವನ್ನು ಹೇಳಿದರೂ ಮೂರ್ಖನು ಇದಿರಿಗೇ ಬಯ್ಯುತ್ತಾನೆ. ಹಾಯುವ ದನಕ್ಕೆ ಹುಲ್ಲುಹಾಕಿದರೂ ಅದು ಕೊಂಬಾಡಿಸುತ್ತದೆ.

ಆದವುಟ್ಟಿಗೂ ಯಾರಿಗೂ ಉಪದೇಶಮಾಡದೆ ಇದ್ದು ಬಿಡುವುದೇ ಜಾಣತನವೆಂದು ಇನ್ನೊಬ್ಬ ಕವಿ ಹೇಳಿದ್ದಾನೆ:

ಎಪ್ಪಟಿಕೆಯ್ಯದಿ ಪ್ರಸ್ತುತ
ಮಪ್ಪಟಿ ಕಾಮಾಟಲಾಡಿ ಯನ್ಯುಲ ಮನಮುಲ್
ನೊಪ್ಪಿಂಪಕ ತಾನೊವ್ವಕ
ತಪ್ಪಿಂಚುಕ ತಿರುಗುವಾಡು ಧನ್ಯುಡು ಸುಮತೀ§ ॥

ಯಾವ ಸಮಯದಲ್ಲಿ ಯಾವ ಮಾತು ಅಗತ್ಯವೋ ಅಷ್ಟು ಮಾತ್ರ ಹೇಳಿ ಇನ್ನೊಬ್ಬರ ಮನಸ್ಸನ್ನು ನೋಯಿಸದೆ ತಾನೂ ನೋಯದೆ ತಪ್ಪಿಸಿಕೊಂಡು ತಿರುಗುವವನು ಧನ್ಯನು.

---

## ೬. ಸಂಕೀರ್ಣ

ಹೊಗೆಸೊಪ್ಪಿನಲ್ಲಿ ವಿಶೇಷ ವ್ಯಾಮೋಹವಿದ್ದ ಕವಿಯೊಬ್ಬನು ಅದರ ಅಸಾಧಾರಣ ಗುಣಗಳನ್ನು ಹೀಗೆ ವರ್ಣಿಸಿದ್ದಾನೆ:

ದಂತಲೂಟೀಘೋರದಂತಿ ಹರ್ಯಕ್ಷಂಬು
ಕುಷ್ಠರೋಗಾಚಲಕುಲಿಶಧಾರ
ಹೀನಸಾಂಡಜ ಭೂರಿವೈನತೇಯಸ್ವಾಮಿ
ವಾತಾಟವೀದಾವ ವಹ್ನಿಕೀಲ

§ 'ಸುಮತಿ' ಎಂಬುದು ಕವಿಯ ಅಂಕಿತ.

ಜಲದೋಷ ಹಿಮಪೂರ ಚಂಡಾರ್ಕ ಕರರೋಚಿ
ಬಹುಳ ಕಾಸಾಂಬೋಧಿಬಾಡಬಂಬು
ಉರುತರಾಜೀರ್ಣೈಣ ಗುರುತರವ್ಯಾಘ್ರಂಬು
ಮುಖರೋಗನಿಖಿಲಜೀಮೂತಪವನ

ಮಸಗ ವಾರ್ತಕುನೆಕ್ಕಿತಿವಖಿಲಜನುಲ
ಜೀವರಕ್ಷಣದಿವ್ಯಸಂಜೀವಿವಗುಚು
ಬ್ರಸ್ತುತಿಂಪಗ ಸಕಲದಿಕ್ಪತುಲಸಭಲ
ನೂರ್ತ್ಥಿತಂಬಗುಸೀರಾಕ ಯೋಪೊಗಾಕ.

ಓ ಹೊಗೆಸೊಪ್ಪೆ ! ನೀನು ಹಲ್ಲುನೋವೆಂಬ ಮದ್ದಾನೆಗೆ ಸಿಂಹ. ಕುಷ್ಠರೋಗವೆಂಬ ಬೆಟ್ಟಕ್ಕೆ ವಜ್ರಾಯುಧ. ಪೀನಸ ರೋಗವೆಂಬ ಹಾವುಗಳಿಗೆ ಸಾಕ್ಷಾತ್ ವೈನತೇಯ (ಗರುಡ) ಸ್ವಾಮಿ ! ವಾತರೋಗವೆಂಬ ಕಾಡಿಗೆ ದಾವಾಗ್ನಿ. ಜಲದೋಷವೆಂಬ ಹಿಮಸಮೂಹಕ್ಕೆ ನೀನು ಸೂರ್ಯರಶ್ಮಿ. ಕಾಸ (ಕೆಮ್ಮು) ರೋಗವೆಂಬ ಸಮುದ್ರಕ್ಕೆ ನೀನು ಬಡಬಾಗ್ನಿ. ಹೆಚ್ಚಾದ ಅಜೀರ್ಣವೆಂಬ ಜಿಂಕೆಗೆ ನೀನು ದೊಡ್ಡ ಹುಲಿ. ಮುಖದಲ್ಲಿ ಉಂಟಾಗುವ ರೋಗಗಳೆಂಬ ಮೋಡಗಳಿಗೆಲ್ಲಕ್ಕೂ ಬಿರುಗಾಳಿ ನೀನು ! ಹೀಗೆ ನಿನ್ನ ಕೀರ್ತಿಯು ಸಮಸ್ತ ಜನರಲ್ಲಿಯೂ ಹಬ್ಬುತ್ತಿದೆ. ಸಮಸ್ತ ದಿಕ್ಪತಿಗಳ ಸಭೆಗಳಲ್ಲಿಯೂ ನೀನು ಸಮಸ್ತ ಜೀವಿಗಳನ್ನೂ ರಕ್ಷಿಸಬಲ್ಲ ದಿವ್ಯಸಂಜೀವಿನಿಯೆಂದು ಹೊಗಳುತ್ತಿದ್ದಾರೆ.*

ಇಷ್ಟೇ ಅಲ್ಲವೆ ಈ ಹೊಗೆಸೊಪ್ಪಿನ ಮಹಿಮೆಯನ್ನು ವೇ

§ ಈ ಕವಿ ವಾಕ್ಯವನ್ನು ನಂಬಿ ಯಾರೂ ಹೊಗೆಸೊಪ್ಪನ್ನು ಬಳಸಬಾರದು. ಅಭ್ಯಾಸವಿಲ್ಲದವರಿಗೆ ಅದು ಅಪಮೃತ್ಯುವಾದೀತು !

ವಾಧಿದೇವತೆಗಳೂ ಹೊಗಳುತ್ತಿರುವರಂತೆ! ದೇವತೆಗಳಿಗೆ ಇದಕ್ಕಿಂತಲೂ ಒಳ್ಳೆಯ ಕೆಲಸವೇನಿದೆ ?

ಗುಂಜಾನರಸಿಂಹಸ್ವಾಮಿಯು ಗುಲಗಂಜಿಯನ್ನು ಕೈಲಿ ಹಿಡಿದಂತೆ ತೋರುತ್ತದೆ. ತಿರುಪತಿಯಲ್ಲಿ ವೆಂಕಟಾಚಲಪತಿಯ ವರದಹಸ್ತವು ನೆಲವನ್ನು ತೋರಿಸುವಂತೆ ಕಾಣುತ್ತದೆ. ಜಗನ್ನಾಥದಲ್ಲಿ ದೇವರು ಸೊಂಟದಮೇಲೆ ಕೈಯಿಟ್ಟುಕೊಂಡಿದ್ದಾನೆ. ಗರುಡನು ಯಾವಾಗಲೂ ತನ್ನ ಎರಡು ಕೈಗಳನ್ನೂ ಮುಂದಕ್ಕೆ ಚಾಚಿಕೊಂಡಿರುತ್ತಾನೆ. ಈ ಸಹಜಸ್ಥಿತಿಯನ್ನೇ ಒಬ್ಬ ಕವಿಯು ಹೊಗೆಯಸೊಪ್ಪನ್ನು ಹೊಗಳುವುದಕ್ಕೆ ಉಪಯೋಗಿಸಿಕೊಂಡಿದ್ದಾನೆ:

ಧರಣೀಜನುಲಕೆಲ್ಲ ಗುರಿಗಿಂಜಮಾಧವುಂ
 ಡಿದಿ ಸಸ್ಯಮನಿ ಕರಂಬೆನಯು ಜೂಪೆ
ಈಸಸ್ಯಫಲವೃಕ್ಷ ಮಿಟಗಲದಂಚುಸು
 ಶೇಷಾಚಲೇಶುಂಡು ಕ್ಷಿತಿಸಿ ಜೂಪೆ

ಈ ಸಸ್ಯಫಲವೃಕ್ಷ ಮಿಂತ ಯೆತ್ತಂಚುನು
 ಘನಜಗನ್ನಾಥುಂಡು ಕಟಿನಿ ಜೂಪೆ
ಈಸಸ್ಯಫಲಮಿದಿ ಯಿಂತ ಪೆಡಲ್ಪಂಚು
 ವಿನತಬಿಡ್ಡಡು ಕರಂಬೆನಯು ಜೂಪೆ

ದೇವತಾವಳಿ ವರ್ಣಿಂಚಿ ತೆಲುಪ್ರಸಕ್ತಿ
ಯಿಟ್ಟಿಮಹಿಮಂಬು ಗಲದೀನಿ ನೆವ್ವರೇನಿ
ಯೆಱುಕ ಲೇಕ ನಿಂದಿಂಚೆದರೇನೋ ಯನುಚು
ಚೆಲಗಿ ವೀರಾಂಜನೇಯುಂಡು ಚೇಯಿಯೆತ್ತೆ.

ಗುಲಗಂಜಿಮಾಧವನು (ಗುಂಜಾನರಸಿಂಹ) ‘ ಇದು ಸಸ್ಯ ’

ಎಂದು ಕೈ ತೋರಿಸುತ್ತಿದ್ದಾನೆ. ಈ ನಶ್ಯದಳದ ವೃಕ್ಷವು 'ಇಲ್ಲಿದೆ' ಎಂದು ಹೇಳುತ್ತಾ ಶೇಷಾಚಲಸ್ವಾಮಿ ಭೂಮಿಯನ್ನು ತೋರಿಸುತ್ತಿದ್ದಾನೆ! ಈ ನಶ್ಯದಳವೃಕ್ಷವು 'ಇಷ್ಟು ಎತ್ತರ' ಎಂದು ಹೇಳುತ್ತ ಜಗನ್ನಾಥಸ್ವಾಮಿಯು ತನ್ನ ಸೊಂಟವನ್ನು ತೋರಿಸುತ್ತಿದ್ದಾನೆ. ಈ ನಶ್ಯದಳವು 'ಇಷ್ಟು ಅಗಲ' ಎಂದು ವಿನತೆಯ ಮಗ (ಗರುಡ)ನು ತನ್ನ ಎರಡು ಕೈಗಳನ್ನು ತೋರಿಸುತ್ತಿದ್ದಾನೆ. ಎಲ್ಲ ದೇವತೆಗಳ ಹೊಗಳಿಕೆಗೆ ಪಾತ್ರವಾದ, ಮಹಿಮಾಯುಕ್ತವಾದ, ಈ ಹೊಗೆಸೊಪ್ಪನ್ನು ಅರಿವಿಲ್ಲದೆ ಯಾರಾದರೂ ನಿಂದಿಸುವರೇನೋ ಎಂದು ಸಿಟ್ಟಿನಿಂದ ವೀರಾಂಜನೇಯನು ಕೈಯೆತ್ತಿದ್ದಾನೆ.

ಇನ್ನು ತಗಣೆಯ ಮಹಿಮೆಯನ್ನು ಸ್ವಲ್ಪ ಕೇಳಿ:

**ಶಿವುಡದ್ರಿನಿ ಶಯಿಂಚುಟ**
**ರವಿಚಂದ್ರುಲು ಮಿಂಟನುಂಟ ರಾಜೀವಾಕ್ಷುಂ**
**ಡವಿರಳಮುಗ ಶೇಷುನಿಪೈ**
**ಬವಳಿಂಚುಟ ನಲ್ಲಿಬಾಧ ಪಡಲೇಕ ಸುಮಿ ॥**

ತಗಣೆಯ ಕಾಟಕ್ಕೆ ಸಹಿಸಲಾರದ ಕಾರಣದಿಂದಲೇ ಶಿವನು ಬೆಟ್ಟದ ಮೇಲಿರುವುದು. ರವಿಚಂದ್ರರು ಆಕಾಶದಲ್ಲಿರುವುದೂ ಮಹಾವಿಷ್ಣು ಯಾವಾಗಲೂ ಹಾವಿನ ಮೇಲೆ ಪವ್ವಳಿಸುವುದೂ ಈ ಕಾರಣದಿಂದಲೇ!

ಸಾಮಾನ್ಯವಾಗಿ ಅಗಸನ ಕೈಗೆ ಸಿಕ್ಕಿ ನರಳದವರಿಲ್ಲ. ಒಂದಲ್ಲ ಒಂದು ವಿಧದಲ್ಲಿ ಅವನ ಕಾಟಕ್ಕೆ ಬೇಸತ್ತವರೇ ಬಹಳ. ಅನೇಕ ಜನರ ಅಂತರಂಗದಲ್ಲಿ ಪ್ರವಹಿಸಿದ ಒಂದು ಭಾವವೇ ಈ ಪದ್ಯದಲ್ಲಿ ಉಕ್ಕಿದೆ.

చాకివానితోడి జగడాలు పడలేక
సిరిగలాడు పట్టు చీరగట్టె
శివుడు తోలుగప్పె నీ యని మదిరోసి
భైరవుడు చీర పారవైచె ||

ಆಗಸನ ಸಂಗಡ ಜಗಳವಾಡಲಾರದೆ ಸಿರಿಯುಳ್ಳವನು (ಲಕ್ಷ್ಮೀಪತಿ) ರೇಷ್ಮೆಬಟ್ಟೆಯುಟ್ಟ; ಶಿವನು ಚರ್ಮವನ್ನು ಹೊದ್ದುಕೊಂಡ. ಭೈರವನಾದರೆ ಮನಸ್ಸು ಬಹಳ ರೋಸಿ ಹೋಗಿ 'ಛೀ' ಎಂದು ಬಟ್ಟೆಯನ್ನೇ ಬಿಸಾಟುಬಿಟ್ಟನು.

ನವೆಯೇ ದೇವೇಂದ್ರಪದವಿಯಂತೆ! ಕೇಳಿ!

తీటగల భాగ్యశాలికి
నీటుగలుంగుగోళ్లు వేడినీళ్లు లభింపన్
దాటించి బఱుకనాగిన
వీటుచె దేవేంద్రపదవి తిరముగ జగతిన్ ||

ಲೋಕದಲ್ಲಿ ನವೆಯುಳ್ಳ ಭಾಗ್ಯಶಾಲಿಗೆ ಉದ್ದವಾದ ಉಗುರುಗಳು, ಬಿಸಿನೀರು ಲಭಿಸಿ ಚೆನ್ನಾಗಿ ಕೆರೆಯ ತೊಡಗಿದರೆ ಖಂಡಿತವಾಗಿಯೂ ನವೆಯೇ ದೇವೇಂದ್ರಪದವಿಯೆಂದೆನ್ನಿಸುತ್ತದೆ!

ಅನಾವೃಷ್ಟಿಯನ್ನು ನೀಗಲು ಬೇರೇನೂ ಮಾರ್ಗತೋರದೆ ಒಬ್ಬ ಕವಿಯು ಮಹೇಶ್ವರನನ್ನು ಪೆದರಿಸಲು ಪ್ರಯತ್ನಿಸಿದ್ದಾನೆ. ಆದರೆ ಈ ಪ್ರಯತ್ನ ಎಷ್ಟುಮಟ್ಟಿಗೆ ಸಫಲವಾಯಿತೋ ತಿಳಿಯದು :

తలనున్న జలమింక తొలకిపోయిన యంత
జన్నిపైదలి న్మై కృశించుననియొ

ಜಡನುನ್ನ ಮೊಗುಲಿಂತ ಜಾರಿ ಪೋಯಿನ ಯಂತ
ಸಿಗಚಕ್ಕದನಮು ಕೊಂಚೆಮಗುನಸಿಯೊ

ಪೊದಿನುನ್ನ ರಸಮಿಂತ ಪೊಂಗಿಪೋಯಿನಯಂತ
ಕ್ರೊತ್ತಮಾಮಬಲಂಬು ಕ್ರುಂಗುನಸಿಯೊ
ಗಿರಿನುನ್ನ ಮಂಚಿಂತ ಕರಗಿಪೋಯಿನಯಂತ
ಪಟ್ಟಂಪುಚೆಲಿತಂಡ್ರಿ ಬಡಲುನಸಿಯೊ

ಧರನನಾವೃಷ್ಟಿ ಬಾಧ ಪಾಲ್ಪಱಿಚಿದೇನಿ
ನೀರಥಪು ಸೊಂಪು ವಮ್ಮಗು ನೀವಱಂದಿ
ವಜ್ರಿಚೇಬಡು ನೀವಿಲ್ಲು ವಹ್ನಿಗಲಯು
ನೀಪಶುಪತಿತ್ವಮುನು ಜೆಡು ನೀಲಕಂಠ.

ಓ ನೀಲಕಂಠ! ನಿನ್ನ ತಲೆಯಲ್ಲಿನ ನೀರು ಒಂದಿಷ್ಟು ತುಳುಕಿಹೋದರೆ ನಿನ್ನ ಕಿರಿಹೆಂಡತಿ (ಗಂಗೆ) ಯು ಮೈ ಕೃಶವಾಗುವುದೆಂತಲೆ? ನಿನ್ನ ಜಡೆಯಲ್ಲಿರುವ ಮೋಡ ಕೊಂಚ ಜಾರಿ ಹೋದರೆ (ಶಿವನಿಗೆ ವ್ಯೋಮಕೇಶನೆಂದು ಹೆಸರು. ಆಕಾಶವೇ ಅವನ ಕೂದಲು) ನಿನ್ನ ಶಿಖೆಯು ಅಂದ ಕಡಿಮೆಯಾಗುವುದೆಂತಲೆ? ಜಡೆಗಳ ಹೊದಿಕೆಯಲ್ಲಿರುವ ರಸ (ನೀರು) ಕೊಂಚ ಉಕ್ಕಿಹೋದರೆ ಚಂದ್ರನ ಬಲವು ಕುಗ್ಗುವುದೆಂತಲೆ? ಬೆಟ್ಟದ ಮೇಲಿನ ಮಂಜು ಕೊಂಚ ಕರಗಿದರೆ ನಿನ್ನ ಪಟ್ಟದರಾಣಿ (ಪಾರ್ವತಿ) ಯ ತಂದೆ ಹಿಮವಂತನು ಬಡಕಲಾಗುವನೆಂದೆ? ಈ ಯಾವ ಕಾರಣದಿಂದಲಾದರೂ ಆಗಲಿ, ನೀನು ಈ ಧರೆಯನ್ನು ಅನಾವೃಷ್ಟಿದೋಷಕ್ಕೀಡುಮಾಡಿದರೆ ನಿನ್ನ ರಥದ (ಭೂಮಿ) ಸೊಂಪು ವ್ಯರ್ಥವಾಗುತ್ತದೆ. ನಿನ್ನ ಮೈದುನ—ಮೈನಾಕ—ಇಂದ್ರನ ಕೈಗೆ ಸಿಕ್ಕಿಬೀಳುತ್ತಾನೆ. ನಿನ್ನ ಬಿಲ್ಲು—

*ಬಂಗಾರದಬೆಟ್ಟ—ಬೆಂಕಿಗೆ ಬೀಳುತ್ತದೆ. (ಲೋಕದ ಜನ ದಾರಿದ್ರ್ಯದೋಷದಿಂದ ತಮ್ಮಲ್ಲಿರುವ ಚಿನ್ನವನ್ನೆಲ್ಲ ಕರಗಿಸುವರೆಂದು ಭಾವ) ನಿನ್ನ ಪಶುಪತಿತ್ವವೂ ಕೆಡುತ್ತದೆ.

ಹೀಗೆ ನೀರಿಗಾಗಿ ಶಿವನನ್ನು ಹೆವರಿಸಿದವರು ಬಹಳ. ಶಿವನಲ್ಲಿ ಬಹಳ ಭಕ್ತಿಯುಳ್ಳ ಶ್ರೀನಾಥಕವಿಯು ಕೂಡ ಒಂದುಸಲ ಪಲ್ನಾಡಿನಲ್ಲಿ ದಾರಿ ನಡೆಯುತ್ತಿದ್ದಾಗ ದಾಹಕ್ಕೆ ತಾಳಲಾರದೆ ಶಿವನನ್ನು ಕುರಿತು ಹೀಗೆ ನುಡಿದಿದ್ದಾನೆ:

ಸಿರಿಗಲವಾನಿಕಿ ಚೆಲ್ಲುನು
ತರುಣುಲು ಪದಿಯಾರುವೇಲ ದಗ ಪೆಂಡ್ಲಾಡನ್
ದಿರಿಪಮುನ ಕಿದ್ದರಾಂಡ್ರಾ
ಪರಮೇಶಾ! ಗಂಗ ವಿಡುಮು ಪಾರ್ವತಿ ಚಾಲುನ್ ‖

ಐಶ್ವರ್ಯವುಳ್ಳವನು (ಲಕ್ಷ್ಮೀಪತಿ) ಹದಿನಾರುಸಾವಿರ ತರುಣಿಯರನ್ನು ಮದುವೆಯಾದರೂ ಸಲ್ಲುತ್ತದೆ. ತಿರುಪಗಾರನಿಗೆ ಇಬ್ಬರು ಹೆಂಡಿರೇಕೆ? ಪರಮೇಶಾ, ಗಂಗೆಯನ್ನು ಬಿಟ್ಟುಬಿಡು ; ನಿನಗೆ ಪಾರ್ವತಿಯೊಬ್ಬಳು ಸಾಕು !

ಅರಸಿಕರಿಗೆ ಕಾವ್ಯವನ್ನು ಹೇಳುವುದಕ್ಕಿಂತ ಹೆಚ್ಚಿನ ದೌರ್ಭಾಗ್ಯವು ಬೇರೆ ಯಾವುದೂ ಇಲ್ಲವೆಂಬುದು ಅನೇಕರ ಅನುಭವಕ್ಕೆ ಬಂದ ವಿಷಯ. ಪಡ್ಡನಿಗೆ ಕಾವ್ಯಸ್ವಾರಸ್ಯವನ್ನು ವರ್ಣಿಸಲು ಪ್ರಯತ್ನಿಸುವುದಕ್ಕಿಂತ ಭಿಕ್ಷಕ್ಕೆ ಹೋಗುವುದಾದರೂ ವಾಸಿಯೆಂಬುದಾಗಿ ಒಬ್ಬ ತೆಲುಗು ಕವಿ ನುಡಿದಿದ್ದಾನೆ:

*ಈಶ್ವರನು ತ್ರಿಪುರಾಸುರನನ್ನು ಕೊಂದಾಗ ಮೇರುಪರ್ವತವನ್ನೇ ಧನುಸ್ಸನ್ನಾಗಿ ಉಪಯೋಗಿಸಿದನು.

ಕವಿತಾಲಕ್ಷಣ ಮೆಱುಗನಿ
ಯವಿವೇಕಿಕಿ ಬದ್ಯಮಿಚ್ಚಿ ಯಡುಗುಟಕಂಟೆನ್
ಚವಿಲೆಗೊನಿ ದಂಡೆಗೈಕೊನಿ
ಭುವಿಲೋ ಹರಿದಾಸುಡೈನ ಬುಣ್ಯಮು ದಕ್ಕೆನ್ ॥

ಕಾವ್ಯಲಕ್ಷಣವನ್ನು ಅರಿಯದ ಅವಿವೇಕಿಗೆ ಪದ್ಯವನ್ನು ಕೊಟ್ಟು ಅವನಲ್ಲಿ ಪುರಸ್ಕಾರವನ್ನುಬಯಸುವುದಕ್ಕಿಂತ ಜೋಳಿಗೆ ತಂಬೂರಿಗಳನ್ನು ಹಿಡಿದು ಹರಿದಾಸನಾಗುವುದು ವಾಸಿ; ಪುಣ್ಯ ವಾದರೂ ಲಭಿಸುತ್ತದೆ.

ಕಾವ್ಯವು ಎಷ್ಟೇ ಚೆನ್ನಾಗಿದ್ದರೂ ವಕ್ರಸ್ವಭಾವದ ಮನು ಷ್ಯರು ಅದರಲ್ಲಿ ಇನ್ನೇನನ್ನೂ ಹುಡುಕದೆ ತಪ್ಪನ್ನೇ ಹುಡುಕು ತ್ತಾರೆ. ಅವರಿಗೆ ಗುಣವನ್ನು ಕಂಡು ಸಂತೋಷಿಸುವ ಸಾಮ ರ್ಥ್ಯವೇ ಇರುವುದಿಲ್ಲ. ಅಂಥ ಪಂಡಿತಂಮನ್ಯರ ವರ್ಣನೆಯಿದು:

ನಕ್ಕಲು ಬೊಕ್ಕಲು ವೆತಕುನು
ಅಕ್ಕಱತೋ ನೂರಬಂದಿಯಗಡಿತವೆತಕುನ್
ಗುಕ್ಕಲು ಚೆಪ್ಪುಲು ವೆತಕುನು
ದಕ್ಕಿಡಿನಾ ಲಂಜಕೊಡಕು ತಪ್ಪೇ ವೆದಕುನ್ ॥

ನರಿಗಳು ಬಿಲಗಳನ್ನು ಹುಡುಕುತ್ತವೆ. ಊರಹಂದಿಗಳು ಅಕ್ಕರೆಯಿಂದ ಕಂದಕವನ್ನೇ ಹುಡುಕುತ್ತವೆ. ನಾಯಿಗಳು ಚಪ್ಪಲಿಗಳನ್ನು ಹುಡುಕುತ್ತವೆ. ಅಯೋಗ್ಯಮಗನು ತಪ್ಪನ್ನೇ ಹುಡುಕುತ್ತಾನೆ!

ಯಾರೋ ಭೋಜನಪ್ರಿಯನಾದ ಕವಿ ಬೇರೂರಿಗೆ ಹೋಗಿ ದ್ದಾಗ ತರಕಾರಿಯೇ ಇಲ್ಲದ ಊಟಮಾಡಬೇಕಾಯಿತು. ಆ

ಸಂದರ್ಭದಲ್ಲಿ ಅಂಜಿಕೆಗೀಡಾದ ತನ್ನ ಅಂಗಾಂಗಗಳಿಗೆ ಅವನು ಧೈರ್ಯಹೇಳಿದ ಕ್ರಮವಿದು—

ಕಠಿನಂಪು ಜೊನ್ನಲ ಕಟುಕುಕುಡ್ಕಲುಸೂಚಿ
  ವಕ್ತ್ರಮಾ! ಭಯಪಡವದ್ದು ಸುಮ್ಮ
ನಾನಾರುಚುಲ್ ಗೋರು ನಾಲುಕಾ ನೀವೇಲ
  ಸಂದೇಹಪಡವದ್ದು ಚಪ್ಪರಿಂಚು

ಎನ್ನಡುಗಡಿಚೇಯು ನೆಱುಗನೆಟ್ಲೋಯನಿ
  ಕುಡಿಹಸ್ತಮಾ! ನೀವು ಜಡಿಯುಬೋಕು
ಕಮ್ಮನಿವಾಸನಲ್ ಗ್ರಕ್ಕುನತೇಲ್ಚೆದಿ
  ಗರ್ಭಮಾ! ಕುಟಕುಟಕಾಕಯುಂಡು.

. . . . . . . . . . . . . . . .

. . . . . . . . . . . . . . . .

ವಚ್ಚು ಬಹುಧಾನ್ಯನಾಮವತ್ಸರಂಬು
ಕಾಯಗೂರಲು ಮನಕು ಸಿಕ್ಕಮುಗ ಗಲ್ಗು.

ಈ ಗಟ್ಟಿಯಾದ ಜೋಳದ ಕಡುಬುಗಳನ್ನು ಕಂಡು ಓ ಬಾಯೇ ನೀನು ಹೆದರಬೇಡ! ನಾನಾ ರುಚಿಗಳನ್ನು ಕೋರುವ ನಾಲಿಗೆಯೇ, ನೀನು ಸಂದೇಹ ಪಡಬೇಡ, ಚಪ್ಪರಿಸು! ಎಂದೂ ತುತ್ತುಮಾಡಿ ಅರಿಯೆನಲ್ಲಾ ಹೇಗೋ, ಎಂದು ಓ ಬಲಗೈಯೇ, ನೀನು ಅಂಜಬೇಡ! ಕಮ್ಮಗಿನ ಸುವಾಸನೆಗಳನ್ನು ಬಯಸುವ ಓ ಹೊಟ್ಟೆಯೇ! ನೀನು ಒದ್ದಾಡಬೇಡ. ಬರುವ ಬಹುಧಾನ್ಯಸಂವತ್ಸರದಲ್ಲಿ ನಮಗೆ ನಿಶ್ಚಯವಾಗಿಯೂ ಕಾಯಿಪಲ್ಯ ಸಿಕ್ಕುತ್ತದೆ.

ಸದಾ ಭೋಜನೈಕಪರಾಯಣರಾದ ಯಾರೋ ಬ್ರಾಹ್ಮಣ ರನ್ನು ಒಬ್ಬ ಕವಿಯು ಈ ರೀತಿಯಾಗಿ ವರ್ಣಿಸಿದ್ದಾನೆ:

ಅಪೂಪಸೂಪ ಸಪ್ತಾಂಗ ಭಂಜನುಲಾರ
ಅಜ್ಯಸಾಗರ ಬಡಬಾಗ್ನುಲಾರ
ಶ್ರಾದ್ಧಾನ್ನಭುಕ್ತಿ ವಿಚಾರತತ್ಪರುಲಾರ
ಪಚ್ಚಳ್ಳರುಚುಲಕು ಮೆಚ್ಚುಲಾರ

ಪೊರುಗೂರು ತಿಂಡಿಕಿ ಪೊಡುಪುಚುಕ್ಕಲ್ಲಾರ
ವೇರೊಕ್ಕಚೋ ವಾಯುವೇಗುಲಾರ
ಪಾನಕವಾಹಿನೀ ಮಾನಭಂಜನುಲಾರ
ಬೊಬ್ಬಟ್ಲ ದೊಂತುಲ ಕುಬ್ಜುಲಾರ

ತಕ್ರಸಾಗರ ವಾತಾಪಿದಮನುಲಾರ
ಜಜ್ಜುಪಾರಿನವ್ರೇಲುಡು ಜೊಜ್ಜುಲಾರ
ದಿನದಿನಮು ತದ್ದಿನಮು ಕೋರು ಧೀರುಲಾರ
ಪಾಱುತೇರಯ್ಯ ! ಸಾಪಾಟುಬಾಪಲಾರ !

ಓ ಸಾಪಾಟು ಬ್ರಾಹ್ಮಣರೆ! ನೀವು ಕಜ್ಜಾಯ ಮುಂತಾ ದವುಗಳಿಂದ ಕೂಡಿದ ಸಪ್ತಾಂಗ (ರಾಜ್ಯ) ವನ್ನು ಭಂಗಪಡಿಸ ಬಲ್ಲಿರಿ. ತುಪ್ಪವೆಂಬ ಸಮುದ್ರಕ್ಕೆ ನೀವು ಬಡಬಾಗ್ನಿಗಳು. ಯಾವಾಗಲೂ ಶ್ರಾದ್ಧಾನ್ನ ವಿಚಾರದಲ್ಲಿಯೇ ಆಸಕ್ತರಾಗಿರು ವಿರಿ; ಮತ್ತು ಚಟ್ನಿಗಳ ರುಚಿಗೆ ಮೆಚ್ಚುತ್ತೀರಿ. ನೆರೆಯೂರಿನ ತಿಂಡಿಗೆ ನೀವು ಉಲ್ಕಾಪಾತಗಳಂತೆ ಇದ್ದಕ್ಕಿದ್ದಂತೆ ಹಾಜರಾಗು ವಿರಿ. ಪಾನಕಪಾತ್ರೆ ಎಷ್ಟು ದೊಡ್ಡದಾದರೂ ನೀವು ಅದರ ಮಾನಹಾನಿಯನ್ನುಂಟುಮಾಡುವಿರಿ. ಮಜ್ಜಿಗೆಯ ಸಮುದ್ರಕ್ಕೆ ನೀವು ವಾತಾಪಿದಮನರಂತೆ ! ಪ್ರತಿ ದಿನವೂ ಶ್ರಾದ್ಧಭೋಜನ ವನ್ನೇ ಕೋರುವ ಧೀರ ಬ್ರಾಹ್ಮಣರೇ ನಿಮಗೆ ಜಯವಾಗಲಿ !

ಸಣ್ಣ ವಿಷಯಗಳನ್ನು ಉದಾತ್ತವಾದ ಶೈಲಿಯಲ್ಲಿ ವರ್ಣಿಸಿದರೆ ಸಾಮಾನ್ಯವಾಗಿ ಹಾಸ್ಯವುಂಟಾಗುತ್ತದೆ. ಇಲಿ ಬೆಕ್ಕುಗಳನ್ನು ಮಹಾಕಾವ್ಯಗಳ ನಾಯಕರಂತೆ ವರ್ಣಿಸಿರುವ ಎರಡು ಪದ್ಯಗಳನ್ನು ಇಲ್ಲಿ ಕೊಟ್ಟಿದೆ:

ನಿರ್ಭಿದ್ರವಿಷಯುಕ್ತ ನಿಶಿತದಂಷ್ಟ್ರಲಬೂನಿ
ಭೇದಿಂಚು ನೆಟುವಂಟಿ ಗಾದೆಲೈನ
ದಾರುಣೋದ್ವೃದ್ಧಂತತತಿಚೇತ ಖಂಡಿಂಚು
ಗುಡಿಸುಗಾ ನೆಟುವೆಂಟಿ ಕೋಕಲೈನ
ಪಟುಸುರಂಗಾಗಾರ ಭರಿತಂಬುಗಾ ದ್ರವ್ವು
ಬೊಂಕಾನ ನೆಟುವಂಟಿ ಭೂಮಿಸೈನ
ಕೀಚು ಕೀಚು ಧ್ವನಿಪ್ರಾಚುರ್ಯ ಮಹಿಮಚೇ
ವರ್ಣಿಂಚು ನೆಟುವಂಟಿ ವಾರಿಸೈನ
ಆತಡು ಸಾಮಾನ್ಯುಡೇ ಸರೇಂದ್ರಾಲಯಾಂತ
ರಂತರಾನೇಕ ಪೇಟಿಕಾಕ್ರಾಂತವಸ್ತು
ಹರಣಸುರಥಾಣಿ ಯುಪ್ಪಿನಾಯಕುಸತಾಣಿ
ಚಾರುತರ ಮೂರ್ತಿ ಮೂಷಕ ಚಕ್ರವರ್ತಿ

ಮೂಷಕ ಚಕ್ರವರ್ತಿಯು ತೀಕ್ಷ್ಣವಾದ ವಿಷದಿಂದ ಕೂಡಿದ, ಹರಿತವಾದ, ಹಲ್ಲುಗಳಿಂದ ಎಂಥ ಭದ್ರವಾದ ಪೆಟ್ಟಿಗೆಗಳನ್ನಾದರೂ ಭೇದಿಸುತ್ತಾನೆ; ಎಂಥ ಶ್ರೇಷ್ಠವಾದ ಬಟ್ಟೆಗಳನ್ನೂ ಆವನು ತನ್ನ ಭಯಂಕರವಾದ ದೊಡ್ಡ ಹಲ್ಲುಗಳಿಂದ ಖಂಡಿಸುತ್ತಾನೆ; ಎಂಥ ಗಟ್ಟಿ ನೆಲದಲ್ಲಾದರೂ ಆವನು ದೊಡ್ಡ ಸುರಂಗಗಳನ್ನು ತೋಡುತ್ತಾನೆ. ಎಷ್ಟು ದೊಡ್ಡವರನ್ನೇ ಆದರೂ ಆವನು 'ಕೀಚು ಕೀಚು' ಎಂಬ ಧ್ವನಿಯಿಂದಲೇ

ವರ್ಣಿಸಿಬಿಡುತ್ತಾನೆ. ಆತನೇನು ಸಾಮಾನ್ಯನೇ? ರಾಜಾಂತಃಪುರಗಳಲ್ಲಿರುವ ಪೆಟ್ಟಿಗೆಗಳೊಳಗಿನ ವಸ್ತುಗಳನ್ನೂ ಭೇದಿಸುವನು. ಅವನು ಆ ವಿನಾಯಕನಿಗೆ ತಾಕಣಾ ಕುದುರೆ! ಮಹಾ ಸುಂದರಮೂರ್ತಿ ನಮ್ಮ ಮೂಷಕ ಚಕ್ರವರ್ತಿ!

ಇನ್ನು ಮಾರ್ಜಾಲ ಚಕ್ರವರ್ತಿಯ ಮಹಾ ಶೌರ್ಯ ಪರಾಕ್ರಮಗಳ ವರ್ಣನೆಯನ್ನು ಕೇಳಿ :

ಕ್ಷೀರಘಟಾಂಬುಧಿಸ್ಥಿತಿಕುಂಭಸಂಭವ
    ಬಹುಮೂಷಕೋರಗಪಕ್ಷಿರಾಜ
ಶುಕಕುಲಮತ್ತೇಭನಿಕರಕಂಠೀರವ
    ಶಲಭಸಂಕುಲವನಜ್ವಾಲಕೀಲ

ವೃಶ್ಚಿಕದಾನವವಿಷ್ಣುಸುದರ್ಶನ
    ವಾಯಸಮೇಘದುರ್ವಾರಪವನ
ಕುಕ್ಕುಟಪರ್ವತಘೋರವಜ್ರಾಯುಧ
    ರೌದ್ರಾಂಧಕಾರ ಮಾರ್ತಾಂಡತೇಜ

ವ್ಯಾಘ್ರಕುಲ ಮಾತುಲಸ್ವಾಮಿ ಶ್ರೀಘ್ರಗಮನ
ಪೈನಮುಲದೊತ್ತಿ ದೊತ್ತುಲ ಪಾಲಿಮಿತ್ತಿ
ರಮ್ಯತರಮೂರ್ತಿ ನಖರಸಂಪ್ರಾಪ್ತಕೀರ್ತಿ
ಸಕಲಗೃಹವರ್ತಿ ಮಾರ್ಜಾಲಚಕ್ರವರ್ತಿ

ಮಾರ್ಜಾಲನು ಹಾಲಿನ ಮಡಿಕೆಯೆಂಬ ಸಮುದ್ರದ ಪಾಲಿಗೆ ಅಗಸ್ತ್ಯಮಹರ್ಷಿ.[1] ಇಲಿಗಳು ಹಾವುಗಳಾದರೆ

[1] ಅಗಸ್ತ್ಯಮಹರ್ಷಿಯು ಒಂದುಸಲ ಸಮುದ್ರದ ನೀರನ್ನೆಲ್ಲ ಆಪೋಶನ ತೆಗೆದುಕೊಂಡುಬಿಟ್ಟಿದ್ದನು.

ಇವನು ಸಾಕ್ಷಾತ್ ಗರುಡ. ಗಿಳಿಗಳ ಸಮೂಹವನ್ನು ಮದ್ದಾನೆಗಳ ಗುಂಪೆಂದು ತಿಳಿಯುವುದಾದರೆ ಇವನು ಸಿಂಹ. ಪತಂಗಗಳ ಕಾಡಿಗೆ ಇವನು ಕಾಳ್ಗಿಚ್ಚು. ಚೇಳುಗಳೆಂಬ ರಾಕ್ಷಸರಿಗೆ ನಮ್ಮ ಮಾರ್ಜಾಲ ಚಕ್ರವರ್ತಿಯು ವಿಷ್ಣುಚಕ್ರ! ಕಾಗೆಗಳೆಂಬ ಮೇಘಗಳಿಗೆ ಇವನು ಜಂಝಾವಾತ. ಕೋಳಿಗಳೆಂಬ ಪರ್ವತಗಳಿಗೆ ಇವನು ಮಹಾ ಭಯಂಕರವಾದ ವಜ್ರಾಯುಧ. ಕ್ರೂರವಾದ ಕತ್ತಲೆಗೆ ಇವನು ಸೂರ್ಯ ಪ್ರಕಾಶನು. ಇಂಥ ನಮ್ಮ ಮಾರ್ಜಾಲ ಚಕ್ರವರ್ತಿಯು ಹುಲಿ ಜಾತಿಗೆ ಸೋದರಮಾವ! ಮಹಾ ವೇಗವಾದ ನಡಿಗೆಯುಳ್ಳ ಇವನು ಇತರರ ಪ್ರಯಾಣಗಳಿಗೆ ಅಡ್ಡಿ. ಇವನ ಕೀರ್ತಿಯೆಲ್ಲ ಇವನ ಉಗುರುಗಳಿಂದಲೇ ಬಂದದ್ದು. ಈ ಚಕ್ರವರ್ತಿಯು ಎಲ್ಲರ ಮನೆಗಳಲ್ಲಿಯೂ ಇರುತ್ತಾನೆ!

ದಾರಿದ್ರ್ಯದ ಅನುಭವವು ಕವಿಗಳಿಗೆ ಮಾತ್ರವೇ ಅಲ್ಲ, ಇತರರಿಗೂ ಇದೆ. ಅದರ ಬೇಗೆಗೆ ಸಿಕ್ಕಿ ಬೆಂದ ಕವಿಗಳು ಆ ಬವಣೆಯನ್ನು ಬಗೆಬಗೆಯಾಗಿ ಬಣ್ಣಿಸಿದ್ದಾರೆ.

ಧನಮು ಲೇಮಿಯನೆಡಿ ದಾವಾನಲಂಬು ಬಡಿ
ತನ್ನು ಜೆಱಚು ಮೀಱಿ ದಾಪುಜೆಱಚು
ಧನಮು ಲೇಮಿ ಮದಿನಿ ದಲಚಿನ ಪಾಪಮು.

ಬಡತನವೆಂಬುದು ಕಾಳ್ಗಿಚ್ಚು. ಅದು ತಾನು ಸುಡುವುದಲ್ಲದೆ ತನ್ನ ಆಶ್ರಯವನ್ನೂ ಸುಡುತ್ತದೆ. ಬಡತನವನ್ನು ಮನಸ್ಸಿನಲ್ಲಿ ನೆನಸಿಕೊಂಡರೂ ಮಹಾಪಾಪ.

ವಿತ್ತಹೀನನೈನ ವೇಳಲಂದುನು ತಲ್ಲಿ
ತನಯುಲಾಲು ಸುಹೃದುಲನೆಡಿವಾರ
ಲೆಲ್ಲ ಶತ್ರುಲಗುದು ರೆಂದೈನ ನಿಜಮಿದಿ.

೩೮. ಸುಭಾಷಿತ ಸಂಗ್ರಹಗಳು- ಎಂ. ಪಿ. ಲಕ್ಷ್ಮೀನೃಸಿಂಹಶಾಸ್ತ್ರೀ, ಎಂ.ಎ.

೩೯. ಮಕ್ಕಳ ಭಾವಜೀವನ- ಬಿ. ಕುಪ್ಪುಸ್ವಾಮಿ ನಾಯಿಡು, ಎಂ.ಎ.

೪೦. ಸಹಕಾರ- ಎಸ್. ಗೋಪಾಲಸ್ವಾಮಿ, ಎಂ.ಎ.

೪೧. ನಯಸೇನ-ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.

೪೨. ಕೌಟಿಲ್ಯ-ಎಂ. ವಿ. ಕೃಷ್ಣರಾವ್, ಎಂ.ಎ., ಬಿ.ಟಿ.

೪೩. ತೆಲುಗು ಚಾಟುಪದ್ಯಗಳು-ಕೆ. ವೆಂಕಟರಾಮಪ್ಪ, ಎಂ.ಎ.

* ಈ ಪುಸ್ತಕಗಳು ಮುಗಿದುಹೋಗಿವೆ.

೧೯೪೨ ನೆಯ ಜುಲೈನಿಂದ ಮುಂದಕ್ಕೆ ಅಚ್ಚಾಗುವ ಪುಸ್ತಕಗಳ ಸಾಧಾರಣ ಪ್ರತಿ ೩ ಆಣೆ, ವಾರ್ಷಿಕ ಚಂದಾ (೯ ಪುಸ್ತಕಗಳಿಗೆ) ರೂ. ೧-೪-೦; ಉತ್ತಮ ಪ್ರತಿ ೪ ಆಣೆ; ವಾರ್ಷಿಕ ಚಂದಾ (೯ ಪುಸ್ತಕಗಳಿಗೆ) ರೂ. ೨-೦-೦.

ಸಂಪಾದಕ, ಪ್ರಚಾರಪುಸ್ತಕಮಾಲೆ,
ಯೂನಿವರ್ಸಿಟಿ ಆಫೀಸ್, ಮೈಸೂರು.